ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




ಸಂಚಿಕೆ: 26 ಜುಲೈ 2019 ಪ್ರಧಾನ ಸಂಪಾದಕರು: ಡಾ. ಎಸ್. ವೆಂಕಟರಾಮು, ಪ್ರಾಂಶುಪಾಲರು www.mahajanafgc.com ಸಂಪಾದಕರು: ಡಾ.ಶ್ರೀಧರ ಹೆಚ್, ಇತಿಹಾಸ ವಿಭಾಗ ಪುಟಗಳು:06

## ಸಂಪಾದಕೀಯ

# ಬಹುಮುಖಿ ಸಾಹಿತ್ಯ ದಿಗ್ಗಜ
## – ಡಾ. ಗಿರೀಶ್ ಕಾರ್ನಾಡ್



ಗಿರೀಶ್ ಕಾರ್ನಾಡ್ ಅವರು ಕನ್ನಡ ಸಾಹಿತ್ಯ ಸಾರಸ್ವತ ಲೋಕದ ದಿಗ್ಗಜ, ಅದ್ಭುತ ನಾಟಕಕಾರ, ಸಾಹಿತಿ, ಚಿತ್ರನಟ ಮತ್ತು ಅಪರೂಪದ ನಿರ್ದೇಶಕರೂ ಕೂಡ ಆಗಿದ್ದಾರೆ. ಕನ್ನಡ ಹಿಂದಿ, ತೆಲುಗು, ತಮಿಳು ಮತ್ತು ಮಲಯಾಳಂ ಭಾಷೆಗಳಲ್ಲಿ ತಮ್ಮ ಅಮೋಘ ನಟನೆಯ ಮೂಲಕ ವಿಶಿಷ್ಠ ಮುದ್ರೆ ಒತ್ತಿರುವ ಇವರು ಭಾರತೀಯ ಚಿತ್ರರಂಗದಲ್ಲಿ ತಮ್ಮದೇ ಕಾಣಿಕೆ ನೀಡಿದ್ದಾರೆ. ಕನ್ನಡ ಸಾಹಿತ್ಯದ ತಮ್ಮ ಸಮಗ್ರ ಕೊಡುಗೆಗಾಗಿ ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿ ಪಡೆದ ಏಳನೇಯ ಸಾಹಿತಿಯಾಗಿದ್ದಾರೆ. ಪ್ರಗತಿಶೀಲ, ಸಮತಾವಾದ ಹಾಗೂ ಜಾತ್ಯಾತೀತತೆಯನ್ನು ತಮ್ಮ ಬರವಣಿಗೆಯ ಮೂಲಕ ವ್ಯಕ್ತಪಡಿಸಿದ್ದಾರೆ.

ಕಾರ್ನಾಡರು ಮೇ 19, 1938ರಂದು ಮಹಾರಾಷ್ಟ್ರದ ಮಾಥೇರಾದಲ್ಲಿ ರಘುನಾಥ ಕಾರ್ನಾಡ ಮತ್ತು ಕೃಷ್ಣಾಬಾಯಿ ದಂಪತಿಗಳಿಗೆ ಮೂರನೇ ಮಗನಾಗಿ ಜನಿಸಿದರು.

ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು, ಧಾರವಾಡದ ಬಾಸೆಲ್ ಮಿಶನ್‌ನಲ್ಲಿ ಪ್ರೌಢ ಶಿಕ್ಷಣವನ್ನು ನಂತರ ಇದೇ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ತಮ್ಮ ಪದವಿ ಶಿಕ್ಷಣವನ್ನು ಮುಗಿಸಿದರು. ನಂತರ ಇಂಗ್ಲೆಂಡಿನ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿ ವೇತನದ ಮೂಲಕ ರಾಜ್ಯಶಾಸ್ತ್ರ, ತತ್ವಶಾಸ್ತ್ರ ಮತ್ತು ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದು, ತದನಂತರ ಚೆನ್ನೈನ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯ ಪ್ರೆಸ್‌ನಲ್ಲಿ 7 ವರ್ಷ ಕರ್ತವ್ಯ ನಿರ್ವಹಿಸಿ, ಅಮೇರಿಕಾದ ಚಿಕಾಗೋ ವಿಶ್ವವಿದ್ಯಾನಿಲಯದಲ್ಲಿ ಸಂದರ್ಶಕ ಪ್ರಾಧ್ಯಾಪಕರಾಗಿ ಒಂದು ವರ್ಷ ಸೇವೆ ಸಲ್ಲಿಸಿದರು. ನಂತರ ಭಾರತೀಯ ಚಲನಚಿತ್ರ ಸಂಸ್ಥೆಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದರು.

*** ಕನ್ನಡ ಸಾಹಿತ್ಯ ಕೊಡುಗೆ**

ಇವರು ಬರೆದ 'ನಾಗಮಂಡಲ' ಸಾಹಿತ್ಯವು ಒಂದು ಜನಪದ ಸಾಹಿತ್ಯ ಕಥೆಯಾಗಿದ್ದು, ಈ ಕೃತಿಯು ಇವರಿಗೆ ಕರ್ನಾಟಕ ಸಾಹಿತ್ಯ ಪ್ರಶಸ್ತಿಯನ್ನು ತಂದು ಕೊಟ್ಟಿತು. ಮನುಷ್ಯನ ಕಾಮವನ್ನು ಬಹುರೂಪಿ ಸರ್ಪದೊಂದಿಗೆ ಸಮೀಕರಿಸಿ ಬರೆದ ಈ ನಾಟಕವು 1997ರಲ್ಲಿ ಹೆಸರಾಂತ ನಿರ್ದೇಶಕರಾದ ಟಿ.ಎಸ್. ನಾಗಾಭರಣರ ನಿರ್ದೇಶನದಲ್ಲಿ ಚಲನಚಿತ್ರವಾಗಿ ಮೂಡಿ ಬಂದು ಅತ್ಯುತ್ತಮ ಕನ್ನಡ ಚಲನಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

ತಲೆದಂಡ, ಅಂಜುಮಲ್ಲಿಗೆ, ಯಯಾತಿ, ತುಘಲಕ್ ಮತ್ತು ಹಯವದನ ಇವರ ಅತ್ಯಂತ ಜನಪ್ರಿಯ ನಾಟಕಗಳಾದವು.

*** ಸಿನಿ ಪಯಣ**

ಕಾರ್ನಾಡರು 1970ರಲ್ಲಿ ತೆರೆಕಂಡ ಯು.ಆರ್. ಅನಂತಮೂರ್ತಿ ಅವರ ಕಾದಂಬರಿ ಆಧಾರಿತ ಸಂಸ್ಕಾರ ಚಲನಚಿತ್ರದ ಮೂಲಕ ರಂಗಪ್ರವೇಶ ಮಾಡಿದರು. ನಂತರ ಶಂಕರನಾಗ್ ನಿರ್ದೇಶನದ 'ಮಾಲ್ಗುಡಿ ಡೇಸ್' ಜನಪ್ರಿಯ ಕಿರುತೆರೆ ಧಾರಾವಾಹಿಯಲ್ಲಿ ನಟಿಸಿ, ಎಸ್.ಎಲ್. ಭೈರಪ್ಪನವರ 'ವಂಶವೃಕ್ಷ' ಕಾದಂಬರಿ ಆಧಾರಿತ ಚಲನಚಿತ್ರವನ್ನು ಕೂಡ ತಾವೇ ನಿರ್ದೇಶಿಸಿದರು. ಈ ಚಿತ್ರವು 'ರಾಷ್ಟ್ರ ಪ್ರಶಸ್ತಿ'ಯನ್ನು ಪಡೆಯಿತು. ಕೆಲವು ಸಾಕ್ಷ್ಯ ಚಿತ್ರಗಳನ್ನು ನಿರ್ದೇಶಿಸಿರುವ ಇವರು ಹಲವು ಕನ್ನಡ, ತೆಲುಗು ಮತ್ತು ಹಿಂದಿ ಚಲನಚಿತ್ರಗಳಲ್ಲಿ ಅಭಿನಯಿಸಿದ್ದಾರೆ.

2011ರಲ್ಲಿ ತಮ್ಮ ಆತ್ಮಚರಿತ್ರೆಯಾದ 'ಆಡಾಡತ ಆಯುಷ್ಯ' ವನ್ನು ರಚಿಸಿದ ಕಾರ್ನಾಡರು ಜೂನ್ 10, 2019ರಂದು ಬಹು ಅಂಗಾಂಗ ವೈಫಲ್ಯದಿಂದ ನಿಧನರಾದರು.

**– ಡಾ. ಶ್ರೀಧರ ಹೆಚ್.**

ಮುಖ್ಯಸ್ಥರು, ಇತಿಹಾಸ ವಿಭಾಗ



## 509ನೇ ಜಯಂತಿಯ ಸ್ಮರಣೆಯಲ್ಲಿ ಮಾಗಡಿ ಕೆಂಪೇಗೌಡರು



ಮಾಗಡಿಯ ಮೇಲೆ ವಿಶೇಷ ಒಲವನ್ನಿಟ್ಟುಕೊಂಡಿದ್ದ ಹಿರಿಯ ಕೆಂಪೇಗೌಡರ ನಂತರ ಪುತ್ರ ಇಮ್ಮಡಿ ಕೆಂಪೇಗೌಡರು ಯಲಹಂಕ ನಾಡಪ್ರಭುಗಳಾಗುತ್ತಾರೆ. ಇವರ ಕಾಲದಲ್ಲಿ ಬೆಂಗಳೂರು ನಗರ ಮತ್ತಷ್ಟು ಅಭಿವೃದ್ಧಿ ಹೊಂದಲ್ಪಟ್ಟು ನಗರದ ರಕ್ಷಣೆಗೆಂದು ನಾಲ್ಕು ದಿಕ್ಕುಗಳಲ್ಲೂ ಗುಡಿ ಗೋಪುರಗಳು ಸ್ಥಾಪಿಸಲ್ಪಡುತ್ತವೆ.

ಮಾಗಡಿ ಪ್ರಾಂತ್ಯವನ್ನು ಅಭಿವೃದ್ಧಿಪಡಿಸಿ 'ಮಾಗಡಿ ಕೆಂಪೇಗೌಡರೆಂದೇ' ಖ್ಯಾತರಾದ ಇವರ ಕಾಲದಲ್ಲಿ ಸಾವನದುರ್ಗದಲ್ಲಿ ನೆಲಪಟ್ಟಣ ಸ್ಥಾಪಿಸಲಾಗಿತ್ತು. ಅರಮನೆ, ಕೋಟೆಯ ಅವಶೇಷಗಳನ್ನು ಇಲ್ಲಿ ಇಂದಿಗೂ ಕಾಣಬಹುದಾಗಿದೆ. ಅದು 1638ನೇ ಇಸವಿ. ಬೆಂಗಳೂರಿನ ನಾಡಪ್ರಭುಗಳ ವಂಶದಲ್ಲಿಯೇ ಹೆಚ್ಚು ಕೀರ್ತಿಗಳಿಸಿದವರು ನಾಡಪ್ರಭು ಹಿರಿಯ ಕೆಂಪೇಗೌಡರು ಯಲಹಂಕ ನಾಡಪ್ರಭುಗಳಾಗಿದ್ದ ಕೆಂಪನಂಜೇಗೌಡ ಮತ್ತು ಲಿಂಗಮಾಂಬೆ ದಂಪತಿಗಳ ಪುತ್ರರಾಗಿ 1510ರಲ್ಲಿ ಜನಿಸಿದ ಕೆಂಪೇಗೌಡರು ಯುವಕರಾಗಿದ್ದಾಗಲೇ ತಂದೆಯವರ ಜೊತೆ ಹಲವಾರು ಯುದ್ಧಗಳಲ್ಲಿ ಪಾಲ್ಗೊಂಡಿದ್ದರು. 1531ರಲ್ಲಿ ಯಲಹಂಕ ನಾಡಿನ ಅಧಿಕಾರ ವಹಿಸಿಕೊಂಡ ನಂತರ ರಾಜ್ಯವನ್ನು ಮತ್ತಷ್ಟು ವಿಸ್ತರಿಸುವ ದೃಷ್ಟಿಯಿಂದ ಹಂಪಿಗೆ ಸರಿಸಮಾನಾದ ಮತ್ತು ವ್ಯವಸ್ಥಿತವಾದ ಹೊಸದೊಂದು ರಾಜಧಾನಿಯನ್ನು ನಿರ್ಮಿಸುವ ಕನಸು ಕಂಡರು. ಆದರೆ ರಾಜಧಾನಿಯ ನಿರ್ಮಾಣ ಕಾರ್ಯ ಅಷ್ಟು ಸುಲಭದ್ದಾಗಿಲ್ಲದ ಕಾರಣ ತಮ್ಮ ಉದ್ದೇಶವನ್ನು ಅಂದಿನ ವಿಜಯನಗರದ ಅರಸರಾಗಿದ್ದ ಅಚ್ಯುತರಾಯರಿಗೆ ತಿಳಿಸಿ ಆರ್ಥಿಕ ನೆರವು ನೀಡುವಂತೆ ಕೋರಿಕೊಂಡರು. ಗೌಡರ ಮನವಿಯನ್ನು ಪುರಸ್ಕರಿಸಿದ ರಾಯರು ಈ ಹಿಂದೆ ಅಮರನಾಯಕತನಕ್ಕೆ ನೀಡಿದ್ದ ಹನ್ನೆರಡು ಹೋಬಳಿಗಳಿಂದ ಸಂಗ್ರಹವಾಗುವ ಕಂದಾಯವನ್ನು ರಾಜಧಾನಿಯ ನಿರ್ಮಾಣಕ್ಕೆ ಬಳಸಿಕೊಳ್ಳುವಂತೆ ಒಪ್ಪಿಗೆ ಸೂಚಿಸಿದರು. ಹೀಗೆ ವಿಜಯನಗರದ ಅರಸರ ಆರ್ಥಿಕ ನೆರವು ಪಡೆದು ಅಂದು ತಮ್ಮ ಕನಸಿಗನುಗುಣವಾಗಿ ಕಟ್ಟಿದ ನಗರವೇ ಇಂದು ನಮ್ಮ ಕರ್ನಾಟಕ ರಾಜ್ಯದ ಹೆಮ್ಮೆಯ ರಾಜಧಾನಿಯಾಗಿರುವ ಬೆಂಗಳೂರು.

ಯಲಹಂಕ ನಾಡಿನ ದಕ್ಷಿಣಕ್ಕಿದ್ದ ವಿಶಾಲವಾದ ಬಯಲು ಮತ್ತು ಕಾಡಿನಿಂದ ಕೂಡಿದ್ದ ಪ್ರದೇಶದಲ್ಲಿ ರಾಜಧಾನಿಯನ್ನು ನಿರ್ಮಿಸಲು ಯೋಜನೆ ರೂಪಿಸಲಾಗಿತ್ತು. ಬೆಂಗಳೂರು ನಗರದ ನಿರ್ಮಾಣ ಕಾರ್ಯವು 1537ರಲ್ಲಿ ಕೆಂಪೇಗೌಡರು ಹೊನ್ನಾರು ಕಟ್ಟುವುದರೊಂದಿಗೆ ಆರಂಭವಾಯಿತು. ನಿರ್ಧಿಷ್ಟ ಪ್ರದೇಶವನ್ನು ಕೇಂದ್ರವಾಗಿಟ್ಟುಕೊಂಡು ನಾಲ್ವರು ರೈತರನ್ನು ನಾಲ್ಕು ಜೊತೆ ಎತ್ತುಗಳಿಗೆ ನೇಗಿಲು ಹೂಡಿ ಶುಭ ಗಳಿಗೆಯಲ್ಲಿ ನಾಲ್ಕು ದಿಕ್ಕಿಗು ಸಾಗುವಂತೆ ತಿಳಿಸಲಾಯ್ತು. ಎತ್ತುಗಳು ನಿಂತ ಜಾಗವೇ ಎಲ್ಲೆಯೆಂದು ತೀರ್ಮಾನಿಸಲಾಯಿತು. ತಾವು ಕಟ್ಟಿಸಬೇಕೆಂದಿರುವ ನೂತನ ರಾಜಧಾನಿಗೆ ನವದ್ವಾರಗಳಿರಬೇಕು. ಒಂಬತ್ತು ಕೆರೆಗಳಿದ್ದು ಅವು ಸದಾಕಾಲ ನೀರಿನಿಂದ ತುಂಬಿರಬೇಕು ಮತ್ತು ರಾಜಧಾನಿಯ ದೇವಾಲಯಗಳಲ್ಲಿ ಪ್ರತಿದಿನವೂ ಪೂಜೆಗಳು ನಡೆಯುತ್ತಿರಬೇಕೆಂಬುದು ಗೌಡರ ಆಶಯವಾಗಿತ್ತು.

ಐದುನೂರು ವರ್ಷಗಳಷ್ಟು ಹಿಂದೆಯೇ ಸುಸಜ್ಜಿತ ಬೆಂಗಳೂರು ನಗರ ನಿರ್ಮಾಣಕ್ಕಾಗಿ ಕೆಂಪೇಗೌಡರು ಪಟ್ಟ ಶ್ರಮ, ಕನಸನ್ನು ನನಸಾಗಿಸುವ ಸಲುವಾಗಿ ಹಗಲು–ಇರುಳೆನ್ನದೆ ಅವರು ದುಡಿದ ರೀತಿ ಆ ಸಂದರ್ಭದಲ್ಲಿ ಗೌಡರ ನೆರವಿಗೆ ನಿಂತ ಪರಿವಾರದವರ ಮತ್ತು ಪ್ರಜೆಗಳ ತ್ಯಾಗ ಮನೋಭಾವ ಕೋಟೆ ಬಾಗಿಲು ನಿಲ್ಲಿಸುವಾಗ ಉಂಟಾದ ವಿಘ್ನದ ನಿವಾರಣೆಗಾಗಿ ಸೊಸೆಯ ಬಲಿದಾನ ಎಲ್ಲವೂ ಜನಪದದ ಬಾಯಲ್ಲಿ ಇಂದಿಗೂ ಕತೆಗಳಾಗಿ, ಲಾವಣಿಗಳಾಗಿ ಉಳಿದುಕೊಂಡಿವೆ.

ಬೆಂಗಳೂರು ನಗರ ನಿರ್ಮಾಣದ ವೇಳೆ ಕೆಂಪೇಗೌಡರು ನಿರ್ಮಿಸಿದ ಕೆರೆಗಳಾದ ಧರ್ಮಾಂಬುಧಿ, ಕೆಂಪಾಬುಧಿ, ಹಲಸೂರು, ಸಂಪಂಗಿ, ಕಾರಂಜಿ ಕೆರೆಗಳು ಸೇರಿದಂತೆ ನೂರಾರು ಕೆರೆ–ಕಟ್ಟೆ–ಕಲ್ಯಾಣಿಗಳು ಮತ್ತು ಗವಿ ಗಂಗಾಧರೇಶ್ವರ, ಹರಿಹರೇಶ್ವರ ದೊಡ್ಡಬಸವಣ್ಣ, ಹಲಸೂರು ಸೋಮೇಶ್ವರ ಸುಬ್ರಹ್ಮಣ್ಯಸ್ವಾಮಿ ಮೊದಲಾದ ದೇವಾಲಯಗಳು ಇಂದಿಗೂ ಲಕ್ಷಾಂತರ ಭಕ್ತಾದಿಗಳನ್ನು ಹೊಂದಿರುತ್ತವೆ. ನಗರದಲ್ಲಿ ವ್ಯಾಪಾರ ಉದ್ದೇಶಕ್ಕಾಗಿ ಜನರ ವೃತ್ತಿಗನುಗುಣವಾಗಿ ನಿರ್ಮಿಸಲಾಗಿದ್ದ ಪೇಟೆಗಳು ಮೂಲ ಹೆಸರಿನಿಂದ ಕರೆಯಲ್ಪಟ್ಟು ನಗರ ನಿರ್ಮಾಪಕರನ್ನು ಸ್ಮರಿಸುವಂತೆ ಮಾಡಿದೆ. ನಗರದ ರಕ್ಷಣೆಗಾಗಿ ನಿರ್ಮಿಸಿದ ಕೋಟೆಯ ಅವಶೇಷಗಳು ಅಂದಿನ ಬೆಂಗಳೂರಿನ ಕಥೆ ಹೇಳುತ್ತಿವೆ.

ನಾಡಪ್ರಭುಗಳಿಗೆ ತಾವು ನಿರ್ಮಿಸುವ ನೂತನ ನಗರದಲ್ಲಿ ಪರಿವಾರದವರೊಡನೆ ರಾಜನಾಗಿ ಮೆರೆಯುವ ಉದ್ದೇಶವಿರಲಿಲ್ಲ.



ಬದಲಾಗಿ ಪ್ರಸಿದ್ಧ ವಾಣಿಜ್ಯ ನಗರಿಯಾಗಿ ರೂಪುಗೊಳ್ಳಬೇಕೆಂಬ ಮಹದಾಸೆ ಇತ್ತು. ನಾಡಿನ ಜನತೆಗೆ ಅಗತ್ಯವಾದ ವಸ್ತುಗಳೆಲ್ಲ ದೊರೆಯಬೇಕು ಮತ್ತು ದೇಶವಿದೇಶಗಳ ವರ್ತಕರುಗಳು ಇಲ್ಲಿಗೆ ಬರುವಂತಾಗಬೇಕು ಎಂಬುದು ಗೌಡರ ನಿರ್ಣಯವಾಗಿತ್ತು. ನುರಿತ ಕುಶಲಕರ್ಮಿಗಳನ್ನು ಕರೆಸಿ ಜನರ ವೃತ್ತಿಗನುಗುಣವಾಗಿ ಪೇಟೆಗಳನ್ನು ನಿರ್ಮಿಸಿ, ಆ ವೃತ್ತಿಯ ಹೆಸರುಗಳನ್ನೇ ಪೇಟೆಗಳಿಗೆ ನಾಮಕರಣ ಮಾಡಿ ಗೌರವದಿಂದ ಬಾಳಲು ಅವಕಾಶ ಒದಗಿಸಿಕೊಟ್ಟರು. ಕೆಂಪೇಗೌಡರು ಸುಮಾರು 54 ಪೇಟೆಗಳನ್ನು ನಿರ್ಮಿಸಿದರೆಂದು ತಿಳಿದುಬರುತ್ತದೆ. ತಮ್ಮ ಪೂರ್ವಿಕರಂತೆಯೇ ಕೃಷಿ ಚಟುವಟಿಕೆಗಳಲ್ಲಿ ಆಸಕ್ತಿ ಉಳ್ಳವರಾಗಿದ್ದರಿಂದ ಕೆಂಪೇಗೌಡರು ನೀರಾವರಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದರು. ಹೀಗಾಗಿ ತಮ್ಮ ಆಡಳಿತಾವಧಿಯಲ್ಲಿ ಕೆರೆ–ಕಟ್ಟೆಗಳನ್ನು ತಮ್ಮ ನಾಡಿನುದ್ದಕ್ಕೂ ನಿರ್ಮಿಸಿದರು. ರಸ್ತೆಯುದ್ಧಕ್ಕೂ ಸಾಲು ಮರಗಳನ್ನು ನೆಡಿಸುವುದರ ಜೊತೆಗೆ ಹಲವಾರು ತೋಟಗಳನ್ನು, ತೋಪುಗಳನ್ನು ಅಭಿವೃದ್ಧಿಪಡಿಸಿ ಅರಣ್ಯ ಸಂರಕ್ಷಣೆಗೆ ಕ್ರಮ ಕೈಗೊಂಡಿದ್ದರು. ಸರ್ವಧರ್ಮಗಳ ಸಮನ್ವಯ ಕೇಂದ್ರವನ್ನಾಗಿ ನಗರವನ್ನು ರೂಪಿಸಿದ ಕೆಂಪೇಗೌಡರು ತಮ್ಮ ಅವಧಿಯಲ್ಲಿ ಮಠ–ಮಾನ್ಯಗಳಿಗೆ, ವಿದ್ಯಾಕೇಂದ್ರಗಳಿಗೆ ಯಥೇಚ್ಛ ನೆರವು ನೀಡಿದ್ದರು ಎಂಬುದು ಅನೇಕ ಕಡೆ ದಾಖಲಾಗಿರುತ್ತದೆ.

ಯಲಹಂಕ ಮತ್ತು ಬೆಂಗಳೂರಿನಿಂದ ಆರಂಭವಾದ ಕೆಂಪೇಗೌಡರ ಮಹತ್ಕಾರ್ಯಗಳು ಮಾಗಡಿ, ಸಾವನ ದುರ್ಗ, ಕುಣಿಗಲ್, ಹೆಬ್ಬೂರು, ರಾಮನಗರ, ಹುಲಿಯೂರು ದುರ್ಗ, ಹುತ್ರಿದುರ್ಗ, ಭೈರವನ ದುರ್ಗ, ಶಿವಗಂಗೆ ಮೊದಲಾದ ಕಡೆಗಳಲ್ಲೂ ನಡೆದಿರುವುದುನ್ನು ಕಾಣಬಹುದು. ಈ ಭಾಗಗಳ್ಲಿ ಹಿಂದಿನ ಕಾಲದಲ್ಲಿ ನಿರ್ಮಾಣವಾಗಿರುವ ಕೋಟೆಗಳನ್ನೂ, ಹಲವಾರು ದೇವಾಲಯಗಳನ್ನೂ, ಕೆರೆ–ಕಟ್ಟೆ–ಕಲ್ಯಾಣಿಗಳನ್ನೂ ಇಂದಿಗೂ ಕಾಣಬಹುದು. ಅಲ್ಲದೇ ಚುಂಚನಗಿರಿಯ ಕಾಲಭೈರವಸ್ವಾಮಿಯ ಆರಾಧಕರಾಗಿದ್ದ ಕೆಂಪೇಗೌಡರು ಜನಾನುರಾಗಿ ಆಡಳಿತ ನಡೆಸಿರುವುದಕ್ಕೆ ಈ ಭಾಗಗಳಲ್ಲಿ ದೊರೆತಿರುವ ಶಿಲಾ ಶಾಸನಗಳು, ಜನಪದ ಕತೆಗಳು ಸಾಕ್ಷಿಯಾಗಿವೆ.

**– ಶ್ರೀ ನಂದೀಶ ಎ.ಆರ್.**
ಇತಿಹಾಸ ಸಹಾಯಕ ಪ್ರಾಧ್ಯಾಪಕರು

# Entry to Service & IQAC

***Orientation Programme***

***on***

## *UPSC EXAMS*

***18.7.2019***






**Prof. Sagar A Deshpande**
National Institute of Engg, Mysuru






**ಡಾ. ಶ್ರೀಧರ ಹೆಚ್.** ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸುವರ್ಣ ಚಾರಿಟಬಲ್ ಟ್ರಸ್ಟ್ (ರಿ.) ಬೆಂಗಳೂರು ಇವರ ಸಹಯೋಗದಲ್ಲಿ 2018–19ರ ಸಾಲಿನ ***'ಕರ್ನಾಟಕ ಸುವರ್ಣಶ್ರೀ'*** ರಾಜ್ಯ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು.









**ವಿಶೇಷ ಉಪನ್ಯಾಸ:**

***ಅಜಾದ್ ಹಿಂದ್ ಸರ್ಕಾರದ 75ನೇ ವಾರ್ಷಿಕೋತ್ಸವ, ಜಲಿಯನ್ ವಾಲಾಭಾಗ್ ದುರಂತ ಹಾಗೂ ಇಂಡಿಯನ್ ಹೋಂರೂಲ್ ಲೀಗ್‌ನ ಶತಮಾನೋತ್ಸವ ಸ್ಮರಣಾರ್ಥ.***

**ಸಂಪನ್ಮೂಲವ್ಯಕ್ತಿ: ಶ್ರೀ ಟಿ.ಎನ್. ರಾಮಕೃಷ್ಣ, ಅಧ್ಯಕ್ಷರು, ರಾಷ್ಟ್ರಗೌರವ ಸಂರಕ್ಷಣಾ ಪರಿಷತ್, ಕರ್ನಾಟಕ – 2.7.2019**



## ❖❖❖ ವಿಭಾಗದ ಶೈಕ್ಷಣಿಕ ಚಟುವಟಿಕೆಗಳು ❖❖❖



**ವಿಶೇಷ ಉಪನ್ಯಾಸ:**
***ಭಾರತದಲ್ಲಿ ಬ್ರಿಟಿಷ್ ಪ್ರಭುತ್ವದ ವಿಸ್ತರಣೆ***

**ಸಂಪನ್ಮೂಲವ್ಯಕ್ತಿ:**
**ಡಾ. ನೈಮುರ್ ರೆಹಮಾನ್**
ನಿವೃತ್ತ ಇತಿಹಾಸ ಪ್ರಾಧ್ಯಾಪಕರು
ಮಹಾರಾಣಿ ಮಹಿಳಾ ಕಲಾ ಕಾಲೇಜು
**4.7.2019**











**ವಿಶೇಷ ಉಪನ್ಯಾಸ :** ***ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಇತಿಹಾಸ ಮತ್ತು ರಾಜಕೀಯ ವಿಶ್ಲೇಷಣೆ***
**ಸಂಪನ್ಮೂಲವ್ಯಕ್ತಿ :** **ಡಾ. ಆರ್.ಎಲ್. ನಾಗರಾಜು,** ನಿವೃತ್ತ ಹಿರಿಯ ಸಂಸ್ಕೃತ ಪ್ರಾಧ್ಯಾಪಕರು
**ಉದ್ಘಾಟನೆ :** **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್,** ವಿಶ್ರಾಂತ ಕುಲಪತಿಗಳು, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ, ಬೆಂಗಳೂರು.



## ಎರಡು ದಿನಗಳ ರಾಷ್ಟ್ರೀಯ ವಿಚಾರ ಸಂಕಿರಣ

*ವಿಷಯ: ಮೈಸೂರು ಸಂಸ್ಥಾನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲದ ಪ್ರಗತಿಪರ ಕಾರ್ಯಗಳು*

*ಸ್ಥಳ : ಇತಿಹಾಸ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬನ್ನೂರು. – 11.7.2019 ರಿಂದ 12.7.2019*




ಪ್ರಬಂಧ ಮಂಡನೆ: ಡಾ. ಶ್ರೀಧರ ಹೆಚ್.

ವಿಷಯ:

*ಕರುನಾಡ ಶಿಕ್ಷಣ ಕಾಶಿ: ಮೈಸೂರು ವಿಶ್ವವಿದ್ಯಾನಿಲಯ*





ಪ್ರಬಂಧ ಮಂಡನೆ: ಡಾ. ಧರ್ಮೇಶ ಎ.ಜಿ.

ವಿಷಯ:

*ಮೈಸೂರು ಸಂಸ್ಥಾನದಲ್ಲಿ ನಾಲ್ವಡಿಯವರ ಕಾಲದಲ್ಲಿ ಮಹಿಳಾ ಶಿಕ್ಷಣದ ಬೆಳವಣಿಗೆ*



ಪ್ರಬಂಧ ಮಂಡನೆ: ಶ್ರೀ ನಂದೀಶ ಎ.ಆರ್.

ವಿಷಯ:

*ಮೈಸೂರು ಸಂಸ್ಥಾನದಲ್ಲಿ ನಾಲ್ವಡಿಯವರ ಕಾಲದಲ್ಲಿ ಕೈಗಾರಿಕೆಗಳ ಪ್ರಗತಿ*

ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




ಸಂಚಿಕೆ: 27 ಆಗಸ್ಟ್ 2019 | ಪ್ರಧಾನ ಸಂಪಾದಕರು: ಡಾ. ಎಸ್. ವೆಂಕಟರಾಮು, ಪ್ರಾಂಶುಪಾಲರು | www.mahajanafgc.com | ಸಂಪಾದಕರು: ಡಾ.ಶ್ರೀಧರ ಹೆಚ್, ಇತಿಹಾಸ ವಿಭಾಗ | ಪುಟಗಳು:06

## ಸಂಪಾದಕೀಯ

# ಭಾರತಾಂಬೆ ಮುಕುಟಕ್ಕೆ ಮುತ್ತಿನ ಮಣಿ




ದೇಶದ ಕರೀಟದಂತಿರುವ ಕಾಶ್ಮೀರದ ಕತೆಯನ್ನು ಮೂಲದಿಂದ ಅಲ್ಲವಾದರೂ ಒಂದು ನಿರ್ಧಿಷ್ಟ ಕಾಲಘಟ್ಟದಲ್ಲಿ ನಿಂತು ನೋಡಬೇಕು.

ಸುದೀರ್ಘ ಕಾಲ ಭಾರತವನ್ನು ಆಳಿದ ಬ್ರಿಟೀಷರು ಆ ಹೊತ್ತಿಗಾಗಲೇ ಎರಡನೇ ಮಹಾಯುದ್ದದಿಂದ ಬಳಲಿ ಹೋಗಿದ್ದರು. ಅದೇ ಕಾಲಕ್ಕೆ ಭಾರತದ ಸ್ವಾತಂತ್ರ್ಯ ಸಂಗ್ರಾಮದ ತೀವ್ರತೆಯು ಅವರನ್ನು ಹಣ್ಣು ಮಾಡಿತ್ತು ಹೀಗೆ ಬಾಹ್ಯ ಸುಸ್ತು, ಆಂತರಿಕ ನಿತ್ರಾಣದಿಂದ ಬಳಲತೊಡಗಿದ ಬ್ರಿಟಿಷರು ಕೊನೆಗೂ ಭಾರತಕ್ಕೆ ಸ್ವಾತಂತ್ರ್ಯ ನೀಡಲು ಬಯಸಿದರು. ಆದರೆ ಸ್ವಾತಂತ್ರ್ಯ ನೀಡುವ ಮುನ್ನ ದೇಶವನ್ನು ವಿಭಜಿಸುವ ತೀರ್ಮಾನಕ್ಕೆ ಬಂದರು ಎಂಬುದು ಮತ್ತೊಂದು ಕತೆ. ಅದೇನೇ ಇರಲಿ, ಹೀಗೆ ದೇಶವನ್ನು ವಿಭಜಿಸಲು ತೀರ್ಮಾನಿಸಿದ ಕಾಲದಲ್ಲಿ ಪ್ರತ್ಯೇಕ ದೇಶ ರಚನೆಯ ಸಂಬಂಧ ಪ್ರಮುಖ ನಾಯಕರ ಜೊತೆ ಚರ್ಚಿಸಿದರು. ಆಗ ದೇಶ ವಿಭಜನೆಗೆ ಅನುಸರಿಸಬೇಕಾದ ಮಾನದಂಡಗಳಲ್ಲಿ ಒಂದು ಅಂಶ ಪ್ರಮುಖವಾಗಿ ಪ್ರಸ್ತಾಪವಾಯಿತು. ಒಟ್ಟಾರೆ ದೇಶದ ವಿವಿಧ ಪ್ರಾಂತ್ಯಗಳಲ್ಲಿ ಇರುವ ಜನಸಂಖ್ಯೆಯ ಆಧಾರದ ಮೇಲೆ ಅದು ಭಾರತಕ್ಕೆ ಸೇರಬೇಕೊ? ಪಾಕಿಸ್ತಾನಕ್ಕೆ ಸೇರಬೇಕೊ? ಎಂಬುದನ್ನು ತೀರ್ಮಾನಿಸಬೇಕು ಎಂಬುದು ಪ್ರಸ್ತಾಪ.

ಇದನ್ನು ಪ್ರಮುಖ ಅಂಶವಾಗಿಟ್ಟುಕೊಂಡು ನೋಡಿದಾಗ ದೊಡ್ಡ ಸಮಸ್ಯೆ ಏನೂ ಎದುರಾಗಲಿಲ್ಲ. ಆದರೆ ಹೈದರಾಬಾದ್ ಸಂಸ್ಥಾನ ಹಾಗೂ ಕಾಶ್ಮೀರದ ವಿಷಯದಲ್ಲಿ ಒಂದು ವಿಚಿತ್ರ ಸನ್ನಿವೇಶ ರೂಪುಗೊಂಡಿತ್ತು. ಜನಸಂಖ್ಯೆಯ ವಿಷಯದಲ್ಲಿ ಅಲ್ಲವಾದರೂ ಆಳರಸರ ಕಾರಣಕ್ಕಾಗಿ ಈ ವಿಚಿತ್ರ ಸನ್ನಿವೇಶ ರೂಪುಗೊಂಡಿತ್ತು. ಅದೆಂದರೆ, ಹೈದ್ರಾಬಾದ್ ಸಂಸ್ಥಾನದ ಜನಸಂಖ್ಯೆಯಲ್ಲಿ ಬಹು ಸಂಖ್ಯಾತರು ಹಿಂದೂಗಳಾಗಿದ್ದರೆ, ಆಳರಸ ಮುಸ್ಲಿಂ ಆಗಿದ್ದ, ಅದೇ ರೀತಿ ಕಾಶ್ಮೀರದಲ್ಲಿ ಹರಿಸಿಂಗ್ ಎಂಬ ಹಿಂದೂ ದೊರೆ ಆಳರಸನಾಗಿದ್ದರೆ, ಜನಸಂಖ್ಯೆಯ ಬಹುಭಾಗ ಮುಸ್ಲಿಂಮರಾಗಿದ್ದರು. ವ್ಯವಸ್ಥೆಯಲ್ಲಿ ಪ್ರಭುತ್ವವೇ ನೀತಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಸಹಜ. ಹೀಗಾಗಿ ಹೈದ್ರಾಬಾದ್ ನಿಜಾಮ ಒಳಗಿಂದೊಳಗೇ ಮಹಮದಾಲಿ ಜಿನ್ನಾ ಅವರ ಜತೆ ಚರ್ಚೆ ನಡೆಸಿ ಪಾಕಿಸ್ತಾನದ ಭಾಗವಾಗಲು ಯತ್ನಿಸತೊಡಗಿದ. ಇದೇ ಕಾರಣಕ್ಕಾಗಿ ನಿಜಾಮ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಮೊರೆಹೋದ. ಹೈದ್ರಾಬಾದ್ ಸಂಸ್ಥಾನ ವಿವಾದಿತ ಸಂಸ್ಥಾನವಾಗಿದ್ದು, ಹೀಗಾಗಿ ಚರ್ಚೆಯ ಮೂಲಕ ವಿಷಯ ಇತ್ಯರ್ಥವಾಗುವವರೆಗೆ ಭಾರತ ಬಲವಂತವಾಗಿ ತನ್ನ ಒಕ್ಕೂಟದೊಳಗೆ ಸೇರಿಸಿಕೊಳ್ಳಬಾರದು ಎಂದು ಸೂಚಿಸಬೇಕು ಎಂದು ಮೊರೆಯಿಟ್ಟ.

ಅದೇ ರೀತಿ ಏರುಧ್ವನಿಯಲ್ಲಿ ಕೂಗುತ್ತಾ ಬ್ರಿಟೀಷ್ ಆಡಳಿತದ ಮೊರೆ ಹೋದ. ಆದರೆ ವಿನ್‌ಸ್ಟನ್ ಚರ್ಚಿಲ್ ಬಿಟ್ಟರೆ ಬೇರೆಯವರು ನಿಜಾಮನ ಪರ ನಿಲ್ಲಲಿಲ್ಲ. ಹೀಗೆ ಹೈದ್ರಾಬಾದ್ ನಿಜಾಮ ಒಂದು ರೀತಿ ಆಟವಾಡತೊಡಗಿದರೆ, ಅತ್ತ ಕಾಶ್ಮೀರದ ರಾಜ ಹರಿಸಿಂಗ್ ಕೂಡ ಪಾಕಿಸ್ತಾನದಲ್ಲಿ ವಿಲೀನವಾಗದೆ ಭಾರತ ಒಕ್ಕೂಟದಲ್ಲಿ ವಿಲೀನವಾಗುವುದಾಗಿ ಹಠ ಹಿಡಿದ. ಈ ಸಂದರ್ಭದಲ್ಲಿ ನಿರ್ಣಾಯಕ ನಿಲುವು ತೆಗೆದುಕೊಂಡು ಮೇಲೆದ್ದು ನಿಂತವರು

ಮು.ತಿ.ನೋ.



ಸರ್ದಾರ್ ವಲ್ಲಬಾಭಾಯ್ ಪಟೇಲ್. ಒಂದು ಕಡೆ ಹೈದ್ರಾಬಾದ್ ಸಂಸ್ಥಾನದ ವಿಷಯದಲ್ಲಿ ರಹಸ್ಯ ಆಟವಾಡುತ್ತಿದ್ದ ಜಿನ್ನಾ ಮತ್ತೊಂದು ಕಡೆಯಿಂದ ಕಾಶ್ಮೀರವನ್ನು ಕಬಳಿಸಲು ಸೇನೆಯನ್ನು ನುಗ್ಗಿಸಿದ.

ಇದರಿಂದ ಕೆರಳಿದ ವಲ್ಲಭಬಾಯ್ ಪಟೇಲ್ ಒಂದು ಕಡೆಯಿಂದ ಭಾರತದೊಳಕ್ಕೆ ವಿಲೀನವಾಗುವ ಒಪ್ಪಂದಕ್ಕೆ ಹರಿಸಿಂಗ್ ಸಹಿ ಹಾಕಲು ಪ್ರೇರಣೆಯಾದರು. ಇನ್ನೂ ಹಲವು ನಾಯಕರು ಈ ಪ್ರೇರಣೆಗೆ ಒತ್ತಾಸೆಯಾಗಿದ್ದರು. ಪರಿಣಾಮವಾಗಿ ಕಾಶ್ಮೀರಕ್ಕೆ ನುಗ್ಗಿದ ಭಾರತದ ಸೇನೆ ಪಾಕಿಸ್ತಾನದ ಸೇನೆಯನ್ನು ಬಗ್ಗು ಬಡಿಯಿತು. ಈ ಸಂದರ್ಭದಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ಮಾತುಕತೆಗಳು ಶುರುವಾದವು. ಪರಿಣಾಮವಾಗಿ ಅವತ್ತು ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವ ನಿಲುವಿಗೆ ಬರಲಾಯಿತು. ಇದರ ಪರಿಣಾಮವಾಗಿ ನಾವೀಗ ಭೂಪಟದಲ್ಲಿ ನೋಡುತ್ತಿರುವ ಕಾಶ್ಮೀರ ಮೂಲದಲ್ಲಿ ಬೇರೆ. ಅದರ ಹೆಚ್ಚುವರಿ ಭಾಗ ಪಾಕ್ ಆಕ್ರಮಿತ ಕಾಶ್ಮೀರ ಎಂಬ ಹೆಸರಿನಲ್ಲಿ ಅಸ್ತಿತ್ವ ಪಡೆದುಕೊಂಡಿದೆ.

ಇದು ಕಾಶ್ಮೀರದ ವಿಷಯವಾದರೆ, ಮತ್ತೊಂದು ಕಡೆ ಭಾರತೀಯ ಸೈನ್ಯವನ್ನು ಸೆಪ್ಟೆಂಬರ್ ಹದಿಮೂರರ ಬೆಳಿಗ್ಗೆ ನಾಲ್ಕು ಗಂಟೆಗೆ ಹೈದ್ರಾಬಾದ್ ಸಂಸ್ಥಾನಕ್ಕೆ ನುಗ್ಗಿಸಿದ ಸರ್ದಾರ್ ವಲ್ಲಭಬಾಯ್ ಪಟೇಲ್ ಆಪರೇಷನ್ ಪೋಲೋ ಕಾರ್ಯಾಚರಣೆಯನ್ನು ಯಶಸ್ವಿಯಾಗಿ ನಡೆಯುವಂತೆ ನೋಡಿಕೊಂಡರು.

ಅಂದಿನ ಪ್ರಧಾನಿ ನೆಹರೂ ಈ ವಿಷಯದಲ್ಲಿ ಸಹಕಾರ ನೀಡಿದರೂ ನಿರ್ಣಾಯಕ ಹೆಜ್ಜೆ ಇಟ್ಟಿದ್ದು ಮಾತ್ರ ವಲ್ಲಭಬಾಯ್ ಪಟೇಲರು. ಯಾವಾಗ ಭಾರತದ ಸೈನ್ಯ ಹೈದ್ರಾಬಾದ್ ಮೇಲೆ ದಾಳಿ ಮಾಡಿತೋ ಆಗ ನಿಜಾಮ ಮತ್ತೆ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಮೊರೆ ಹೋದ. ಆದರೆ ಅದು ಯಾವುದೇ ತೀರ್ಮಾನಕ್ಕೆ ಬರುವ ಮುಂಚೆ ಅಂದರೆ, ಸೆಪ್ಟೆಂಬರ್ ಹದಿನೇಳರಂದು ನಿಜಾಮ ಗತ್ಯಂತರವಿಲ್ಲದೆ ಭಾರತೀಯ ಸೈನ್ಯಕ್ಕೆ ಶರಣಾದ. ಹೀಗೆ ಹೈದ್ರಾಬಾದ್ ಸಂಸ್ಥಾನ ಭಾರತದ ಒಕ್ಕೂಟದೊಳಗೆ ಸೇರಿಕೊಂಡಿತು.

ಈ ಮಧ್ಯೆ ಕಾಶ್ಮೀರವನ್ನು ತನ್ನ ತೆಕ್ಕೆಗೆ ತೆಗೆದುಕೊಂಡ ಭಾರತ ಅದಕ್ಕೆ ಸ್ವಾಯುತ್ತತೆಯೂ ಸೇರಿದಂತೆ ಹಲವು ಅನುಕೂಲಗಳನ್ನು ಸಂವಿಧಾನಬದ್ಧ ನೆಲೆಯಲ್ಲಿಯೇ ನೀಡಿತು. ಹೀಗೆ ಭಾರತದಲ್ಲಿ ವಿಲೀನಗೊಂಡರೂ ಕಾಶ್ಮೀರದ ಬಹು ಸಂಖ್ಯಾತರು ಪಾಕಿಸ್ತಾನದ ಪರವಾಗಿಯೇ ನಿಂತಿದ್ದರು. ದೇಶದ ಜನರ ತೆರಿಗೆ ದುಡ್ಡಿನ ದೊಡ್ಡ ಪಾಲು ಕಾಶ್ಮೀರಕ್ಕೆ ನಿರಾಯಾಸವಾಗಿ ತಲುಪಿದರೂ ಜನಮತ ಗಣನೆಯ ಆಧಾರದ ಮೇಲೆ ಕಾಶ್ಮೀರ ಪ್ರತ್ಯೇಕವಾಗಬೇಕು ಎಂಬ ಕೂಗು ಗಟ್ಟಿಯಾಗುತ್ತಲೇ ಹೋಯಿತು. ಇದರ ಭಾಗವಾಗಿ ಭಯೋತ್ಪಾದನೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಲೇ ಹೋಯಿತು. ಇದನ್ನು ಪ್ರಮುಖವಾಗಿಟ್ಟುಕೊಂಡ ಸಂಘ ಪರಿವಾರದ ನಾಯಕ ಶ್ಯಾಮ್ ಪ್ರಸಾದ್ ಮುಖರ್ಜಿ ಅವರಿಂದ ಹಿಡಿದು ಮುಂದೆ ಬಿಜೆಪಿ ನಾಯಕರ ತನಕ ಎಲ್ಲರೂ 'ಏಕ್ ದೇಶ್ ಮೇ ದೋ ಪ್ರಧಾನ್', 'ದೋ ನಿಶಾನ್ ನಹೀ ಚಲೇಗಾ', 'ನಹೀ ಚಲೇಗಾ' ಅಂತ ಕೂಗು ಹಾಕತೊಡಗಿದರು.

ಒಂದು ವೇಳೆ ಹೈದ್ರಾಬಾದ್ ಸಂಸ್ಥಾನದ ವಿಷಯದಲ್ಲಿ ಮಹಮದಾಲಿ ಜಿನ್ನ ಪ್ರಾಮಾಣಿಕವಾಗಿ ನಡೆದುಕೊಂಡಿದ್ದರೆ ಕಾಶ್ಮೀರವನ್ನು ಭಾರತದ ಒಕ್ಕೂಟದೊಳಕ್ಕೆ ಸೇರಿಸಿಕೊಳ್ಳುವ ಹಠ ಸರ್ದಾರ್ ವಲ್ಲಭಬಾಯ್ ಪಟೇಲರಲ್ಲಿ ಮೊಳೆಯುತ್ತಿರಲಿಲ್ಲ ಎಂಬ ಮಾತು ಈಗಲೂ ಚಾಲ್ತಿಯಲ್ಲಿದೆ. ಆದರೆ ಏನೇ ಮಾಡಿದರೂ ಪಾಕಿಸ್ತಾನದ ಜನಕನ ಕಪಟ ನೀತಿ ಕಾಶ್ಮೀರ ಎಂಬ ಬೆಂಕಿ ಉಭಯ ದೇಶಗಳ ಮಧ್ಯೆ ನಿರಂತರವಾಗಿ ಉರಿಯುವಂತೆ ಮಾಡಿತು. 'ವಸ್ತು ಸ್ಥಿತಿ' ಎಂದರೆ ಕಾಶ್ಮೀರ ಸಮಸ್ಯೆಯನ್ನು ಬಗೆಹರಿಸುವುದಕ್ಕಿಂತ ಮುಖ್ಯವಾಗಿ ಅದನ್ನು ಜೀವಂತವಾಗಿಡುವುದರಲ್ಲೆ ಉಭಯ ದೇಶಗಳ ನಾಯಕರಿಗೆ ಲಾಭವಿತ್ತು.

ಆದರೆ ಈ ಲಾಭಕ್ಕಿಂತ ಮಿಗಿಲಾದ ಲಾಭ ದಕ್ಕಿರುವುದು ಮೋದಿ ಸರ್ಕಾರಕ್ಕೆ. ಒಂದು, ಅದು ತನ್ನ ಗುರಿಯನ್ನು ಈಡೇರಿಸಿಕೊಂಡಿತು. ಎರಡನೇಯದಾಗಿ ಕಾಶ್ಮೀರ ಕೂಡ ಈ ದೇಶದ ಒಂದು ಭಾಗ. ಹೀಗಾಗಿ ಕಾಶ್ಮೀರಿಗಳೂ ನಮ್ಮಂತೆಯೇ ಇರಬೇಕು ಎಂಬ ದೇಶದ ಜನರ ಬಯಕೆಯನ್ನು ಈಡೇರಿಸಿದ್ದು. ಅದೀಗ ಒಂದು ಮಟ್ಟದಲ್ಲಿ ಸಾಕಾರವಾಗುವ ಹಂತಕ್ಕೆ ಬಂದಿದೆ. ಮುಂದೆ ಅದು ಇನ್ಯಾವ ರೂಪಗಳನ್ನು ಪಡೆಯುತ್ತದೋ ಗೊತ್ತಿಲ್ಲ. ಯಾಕೆಂದರೆ ಕಾಶ್ಮೀರ ವಿವಾದವನ್ನು ಹಿಡಿದುಕೊಂಡು ಪಾಕಿಸ್ತಾನ ಜಗತ್ತಿನ ಪ್ರಬಲ ರಾಷ್ಟ್ರಗಳ ಮುಂದೆಲ್ಲ ಒರಲಾಡುತ್ತಲೇ ಬಂದಿದೆ. ವಿಶ್ವಸಂಸ್ಥೆಯಲ್ಲೂ ಅದರ ಎಫ್‌ಐಆರ್ ಉಳಿದುಕೊಂಡೇ ಇದೆ. ಆದರೆ ಕಾಶ್ಮೀರ ಸಮಸ್ಯೆಯ ಪರಿಹಾರಕ್ಕೆ ಮೂರನೇ ರಾಷ್ಟ್ರದ ಮಧ್ಯಸ್ಥಿಕೆಯ ಅಗತ್ಯವಿಲ್ಲ ಎಂಬ ಧೋರಣೆಯನ್ನು ಭಾರತ ಮುಂಚಿನಿಂದಲೂ ಜಾರಿಯಲ್ಲೇ ಇಟ್ಟಿದೆ. ಅಮೇರಿಕಾ, ಚೀನಾ ಸೇರಿದಂತೆ ಯಾವ ದೇಶವೂ ಈ ವಿಷಯದಲ್ಲಿ ಮಧ್ಯೆ ಪ್ರವೇಶಿಸದಂತೆ ನೋಡಿಕೊಂಡಿದೆ. ಹೀಗಾಗಿ ಇಂದಿನ ಬೆಳವಣಿಗೆ ಬಹುಸಂಖ್ಯಾತ ಭಾರತೀಯರು ಬಯಸಿದ್ದು ಬೆಳವಣಿಗೆ. ಈ ಸಾಧನೆಗಾಗಿ ಪ್ರಧಾನಿ ನರೇಂದ್ರಮೋದಿ ನೇತೃತ್ವದ ಕೇಂದ್ರ ಸರ್ಕಾರ ಸಮಸ್ತ ಭಾರತೀಯರ ಅಭಿನಂದನೆಗೆ ಅರ್ಹ.

**– ಡಾ. ಶ್ರೀಧರ ಹೆಚ್.**
ಮುಖ್ಯಸ್ಥರು, ಇತಿಹಾಸ ವಿಭಾಗ



# ಕರುನಾಡ ಪ್ರಗತಿಯ ಹರಿಕಾರ ಶ್ರೀ ಡಿ. ದೇವರಾಜ ಅರಸು



ಶ್ರೀ ಡಿ ದೇವರಾಜ ಅರಸುರವರು ಕರ್ನಾಟಕ ಕಂಡ ಶ್ರೇಷ್ಠ ಸಾಮಾಜಿಕ ನ್ಯಾಯದ ಹರಿಕಾರರು . ಇವರು ಎರಡು ಬಾರಿ ಕರ್ನಾಟಕದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿ ಬಡವರ, ದೀನದಲಿತರ, ಶೋಷಿತರ ಧ್ವನಿಯಾಗಿ ರಾಜಕಾರಣದಲ್ಲಿ ತಮ್ಮದೇ ಛಾಪನ್ನು ಮೂಡಿಸಿದವರು. ಇವರು ಮೈಸೂರು ಸಂಸ್ಥಾನದ ಹುಣಸೂರಿನ ಬಳಿ ಇರುವ ಕಲ್ಲಹಳ್ಳಿಯಲ್ಲಿ 30ನೇ ಆಗಸ್ಟ್ 1915ರಲ್ಲಿ ಜನಿಸಿದರು. ಇವರ ತಂದೆ ದೇವರಾಜ ಅರಸ್, ಅವರು ಭೂ ಮಾಲೀಕರಾಗಿದ್ದರು. ತಾಯಿ ಶ್ರೀಮತಿ ದೇವಿರಾ ಅಮ್ಮಣ್ಣಿ ಧರ್ಮನಿಷ್ಟ ಮತ್ತು ಸಾಂಪ್ರದಾಯಿಕ ಮಹಿಳೆ. ಇವರ ಕುಟುಂಬವು ಒಡೆಯರ್ ಕುಟುಂಬದ ದೂರದ ಸಂಬಂಧಿಯಾಗಿದ್ದು ಅರಸು ಮನೆತನದೊಂದಿಗೆ ನಂಟು ಹೊಂದಿತ್ತು. ಇವರು ತಮ್ಮ 15ನೇ ವಯಸ್ಸಿನಲ್ಲೆ ಚಿಕ್ಕಅಮ್ಮಣ್ಣಿ ಎಂಬ ಸ್ತ್ರೀಯೊಂದಿಗೆ ವಿವಾಹವಾದರು. ಇವರಿಗೆ ಮೂವರು ಹೆಣ್ಣುಮಕ್ಕಳು ಚಂದ್ರಪ್ರಭಾ, ನಾಗರತ್ನ ಮತ್ತು ಭಾರತಿ. ಇವರು ತಮ್ಮ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣವನ್ನು ಮೈಸೂರಿನ ಅರಸು ಬೋರ್ಡಿಂಗ್ ಶಾಲೆಯಲ್ಲಿ ಪಡೆದರು. ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ಬಿ.ಎಸ್ಸಿ ಪದವಿ ಪಡೆದರು.

**ರಾಜಕೀಯ ಜೀವನ**

ಅರಸುರವರು ತಮ್ಮ ಶಿಕ್ಷಣವನ್ನು ಮುಗಿಸಿದ ನಂತರ ತಮ್ಮ ಸ್ವಗ್ರಾಮವಾದ ಕಲ್ಲಹಳ್ಳಿಗೆ ಬಂದು ಕೃಷಿಯಲ್ಲಿ ತೊಡಗಸಿಕೊಂಡರು. ಆದರೆ ಅವರ ಸಹಜ ನಾಯಕತ್ವ ಗುಣವು ಅವರನ್ನು ರಾಜಕೀಯಕ್ಕೆ ಕರೆತಂದಿತ್ತು. 1952ರಲ್ಲಿ ರಾಜಕೀಯಕ್ಕೆ ಪ್ರವೇಶಿಸಿದ ಇವರು ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಸ್ಪರ್ಧಿಸಿ ಹುಣಸೂರು ಕ್ಷೇತ್ರದಿಂದ ಗೆಲವು ಸಾಧಿಸಿದರು. ಮತ್ತೆ 1957ರಲ್ಲಿ ಸ್ಪರ್ಧಿಸಿ ಗೆಲುವು ಸಾಧಿಸಿದರು. ಇವರು ಶ್ರೀಮತಿ ಇಂದಿರಾಗಾಂಧಿಯವರ ಪ್ರಬಲ ಅನುಯಾಯಿಗಳಾಗಿದ್ದರು. 1972ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಪಡೆದು 20ನೇ ಮಾರ್ಚ್ 1972 ರಿಂದ 31ನೇ ಡಿಸೆಂಬರ್ 1977ರವರೆಗೆ ಕರ್ನಾಟಕದ 8ನೇ ಮುಖ್ಯಮಂತ್ರಿಯಾಗಿ ಸೇವೆಸಲ್ಲಿಸಿದರು. 28ನೇ ಫೆಬ್ರವರಿ 1978 ರಿಂದ 7ನೇ ಜನವರಿ 1980ರವರೆಗೆ ಎರಡನೇ ಬಾರಿ ಇವರು ಮುಖ್ಯಮಂತ್ರಿಯಾದರು. 1952ರಿಂದ 1982ರವರೆಗೆ ಸುಮಾರು 30 ವರ್ಷಗಳ ಕಾಲ ಹುಣಸೂರು ಕ್ಷೇತ್ರದಿಂದ ಶಾಸಕರಾಗಿ ನಿರಂತರವಾಗಿ ಆಯ್ಕೆಯಾದರು.

**ಸಾಧನೆಗಳು:** ಡಿ. ದೇವರಾಜ ಅರಸುರವರು ಮುಖ್ಯಮಂತ್ರಿಯಾದ ನಂತರ ಕರ್ನಾಟಕದ ಭಿನ್ನತೆಗೆ ಒಳಗಾದ ವರ್ಗಗಳನ್ನು ಅಂದರೆ ಪರಿಶಿಷ್ಟಜಾತಿ ಮತ್ತು ಇತರ ಹಿಂದುಳಿದ ಜಾತಿಗಳನ್ನು ಗುರಿಯಾಗಿಸಿಕೊಂಡು ಸುಧಾರಣೆಗಳನ್ನು ಜಾರಿಗೊಳಿಸಿದರು. ಬಡತನ ನಿರ್ಮೂಲನೆಯೇ ಅವರ ಮೊದಲ ಆದ್ಯತೆಯಾಗಿತ್ತು. ಈ ಕಾರ್ಯಕ್ಕಾಗಿ **'ಗರೀಬಿ ಹಟಾವೋ'** ಎಂಬ ಘೋಷಣೆಯನ್ನು ಹೊರಡಿಸಿದರು. ಮೈಸೂರು ರಾಜ್ಯವನ್ನು 1ನೇ ನವೆಂಬರ್ 1973ರಲ್ಲಿ ಕರ್ನಾಟಕ ಎಂದು ಮರು ನಾಮಕರಣ ಮಾಡಿದರು. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಶಿಕ್ಷಣದ ಸೌಲಭ್ಯಗಳನ್ನು ಒದಗಿಸಿದರು. ಹಿಂದುಳಿದ ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸಿದರು. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಸೌಲಭ್ಯವನ್ನು ಒದಗಿಸಿದರು. 1976ರಲ್ಲಿ ಎಲೆಕ್ಟ್ರಾನಿಕ್ ಸಿಟಿ ನಿರ್ಮಾಣ ಮಾಡಲು ಶಿಲಾನ್ಯಾಸ ಮಾಡಿದರು. ದೇವರಾಜು ಅರಸುರವರ ದೂರದೃಷ್ಟಿಯ ಆಡಳಿತದ ನಿರ್ಧಾರಗಳು ಕ್ರಾಂತಿಕಾರಿ ಬದಲಾವಣೆಗೆ ನಾಂದಿಯಾದವು. ಗೇಣಿ ಶಾಸನ, ಹಾವನೂರು ಆಯೋಗ ರಚನೆಯಂತಹ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಂಡರು. ಹಿಂದುಳಿದ ವರ್ಗಗಳ ಕಲ್ಯಾಣಕ್ಕಾಗಿ ಹಾವನೂರು ಆಯೋಗ ರಚಿಸದಿದ್ದರೆ ಈವರೆಗೂ ಬಹು ಸಂಖ್ಯಾತರಿಗೆ ನ್ಯಾಯ ಸಿಗುತ್ತಿರಲಿಲ್ಲ. ರೈತರಿಗಾಗಿ ಇವರು ನೀರಾವರಿ ಯೋಜನೆಗಳನ್ನು ಜಾರಿಗೆ ತಂದು ರೈತರ ಬಾಳಿಗೆ ಆಶಾ ಕಿರಣವಾದರು. ಇಷ್ಟೆಲ್ಲಾ ಸಾಧನೆಗಳ ರೂವಾರಿಗಳಾದ ದೇವರಾಜು ಅರಸುರವರು 6ನೇ ಜೂನ್ 1982ರಲ್ಲಿ ನಿಧನ ಹೊಂದಿದರು.

ಕರ್ನಾಟಕ ಸರ್ಕಾರವು ಹಿಂದುಳಿದ ವರ್ಗಗಳ ಜನರ ಆರ್ಥಿಕ ಮತ್ತು ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳಲು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಎಂಬ ಇಲಾಖೆಯನ್ನು ಸ್ಥಾಪಿಸಿದೆ. ಈ ನಿಗಮವು ಹಿಂದುಳಿದ ವರ್ಗಗಳ ಶಿಕ್ಷಣ ಮತ್ತು ವ್ಯಾಪಾರಕ್ಕೆ ಸಾಲ ಸೌಲಭ್ಯ ಒದಗಿಸುತ್ತಾ ಬಂದಿದೆ. 2015ರಲ್ಲಿ ದೇವರಾಜು ಅರಸು ಅವರ 100ನೇ ವರ್ಷದ ಜನ್ಮದಿನಾಚರಣೆಯ ಪ್ರಯುಕ್ತ ಇವರ ಹೆಸರಿನಲ್ಲಿ ವರ್ಷಪೂರ್ತಿ ಕಾರ್ಯಕ್ರಮಗಳು ನಡೆಸಲಾಯಿತು. ಹಾಗೆಯೇ ಇವರು ಜನಿಸಿದ ಹುಣಸೂರಿನ ಬಳಿ ಇರುವ ಕಲ್ಲಹಳ್ಳಿ ಗ್ರಾಮವನ್ನು ಸರ್ಕಾರ ಅಧಿಕೃತವಾಗಿ ದತ್ತು ಪಡೆದುಕೊಂಡು ಅಭಿವೃದ್ಧಿ ಪಡಿಸುತ್ತಿದೆ.

**– ಡಾ. ಧರ್ಮೇಶ ಎ.ಜಿ.**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ



***Departments of History, Library, Research Cell & IQAC***

**Jointly organise One Day State Level Workshop - 07.08.2019**

***Emerging Trends in Research-II***

Chief Guest

**Dr. K.M. Mahadevan,** M.Sc., Ph.D.,

Registrar (Evaluation)

University of Mysore, Mysuru.




















# Technical Sessions and Panel Discussion




















## ಸಮಸ್ಯೆಗಳಿಗೆ ಪರಿಹಾರ ಸಿಗುವಂಥ ಸಂಶೋಧನೆ ಆಗಲಿ

### ರಾಜ್ಯಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಮೈವಿವಿ ಕುಲಸಚಿವ ಡಾ.ಕೆ.ಎಂ.ಮಹದೇವನ್ ಅಭಿಮತ

ಮೈಸೂರು,ಆ.7– ಸಂಶೋಧಕರು ಸಮಸ್ಯೆಯ ಆಯ್ಕೆ, ಸಂಬಂಧಿತ ಸಾಹಿತ್ಯಾವಲೋಕನ, ಸಮಸ್ಯೆಯ ವ್ಯಾಖ್ಯಾನ, ಸಂಶೋಧನೆಯ ವಿನ್ಯಾಸ ತಯಾರಿಕೆ, ದತ್ತಾಂಶ ಸಂಗ್ರಹಣ ಮತ್ತು ವಿಶ್ಲೇಷಣೆ ವಿಧಾನಗಳು ಸಂಶೋಧನೆಗೆ ಅವಶ್ಯ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ಡಾ.ಕೆ.ಎಂ.ಮಹದೇವನ್ ತಿಳಿಸಿದರು.

ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗ, ಗ್ರಂಥಾಲಯ ಮತ್ತು ರಿಸರ್ಚ್ ಸೆಲ್ ಮತ್ತು ಐಕ್ಯೂಎಸಿ ವತಿಯಿಂದ ಏರ್ಪಡಿಸಿದ್ದ 'ಸಂಶೋಧನೆಯಲ್ಲಿ ಉದಯೋನ್ಮುಖ ಪ್ರವೃತ್ತಿಗಳು-2' ಎಂಬ ವಿಷಯ ಬಗ್ಗೆ ಒಂದು ದಿನದ ರಾಜ್ಯಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಹಳೆಯದರಲ್ಲಿ ಹೊಸ ಹೊಸ ವಿಚಾರಗಳನ್ನು ಅನ್ವೇಷಣೆ ಮಾಡುವುದು, ತಮ್ಮ ಪ್ರಬಂಧದಲ್ಲಿ ಹೊಸತನ್ನು ನೀಡುವುದು ಮುಖ್ಯವಾಗಿರುತ್ತದೆ. ಲಭ್ಯವಿರುವ ಜ್ಞಾನವನ್ನು ಮಾನವ ಉಪಯುಕ್ತತೆಗಾಗಿ ಸದ್ಬಳಕೆ ಮಾಡುವುದೇ ಸಂಶೋಧನೆಯ ಸಿದ್ಧಾಂತ. ಸಂಶೋಧನೆಗಳು ಒಂದು ಕ್ಷೇತ್ರಕ್ಕೆ ಸೀಮಿತವಾಗಿರದೇ, ಸಮಸ್ಯೆಗಳಿಗೆ ತಕ್ಷಣ ಪರಿಹಾರವನ್ನು ಕಂಡುಹಿಡಿಯುವ ಗುರಿಯನ್ನು ಹೊಂದಿರಬೇಕು ಎಂದರು.

ಮಹಾಜನ ವಿದ್ಯಾಸಂಸ್ಥೆ ಕಾರ್ಯದರ್ಶಿ ಡಾ.ವಿಜಯಲಕ್ಷ್ಮಿ ಮುರಳೀಧರ್, ಕಾಲೇಜಿನ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ.ಎಸ್. ಆರ್.ರಮೇಶ್, ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್.ಶ್ರೀಧರ, ಗ್ರಂಥಪಾಲಕ ಎಂ.ವೀಣಾ, ಸ್ತಬ್ಧಚಿತ್ರಗಳ ಪ್ರದರ್ಶನದ ಆಯೋಜಕರಾದ ಡಾ.ಇಂದ್ರಾಣಿ, ಎಸ್‌ಡಿಎಂ–ಐಎಂಡಿಯ ಗ್ರಂಥಪಾಲಕ ಡಾ.ಎಂ.ವಿ.ಸುನಿಲ್, ಪ್ರೊ.ಎಂ. ಮಿನಾಜ್, ಮೈವಿವಿ ಆಡಳಿತ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಡಿ.ಆನಂದ್ ಮತ್ತಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಮೈಸೂರಿನ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಏರ್ಪಡಿಸಿದ್ದ ಕಾರ್ಯಾಗಾರವನ್ನು ಕುಲಸಚಿವ ಡಾ.ಕೆ. ಎಂ.ಮಹದೇವನ್ ಉದ್ಘಾಟಿಸಿದರು. ಡಾ.ವಿಜಯಲಕ್ಷ್ಮಿ ಮುರಳೀಧರ್, ಡಾ.ಎಸ್.ಆರ್.ರಮೇಶ್, ಡಾ. ಎಸ್.ವೆಂಕಟ ರಾಮು, ಡಾ.ಶ್ರೀಧರ, ಡಾ.ಎಂ.ವಿ.ಸುನಿಲ್ ಚಿತ್ರದಲ್ಲಿದ್ದಾರೆ.





# One day Education Trip - 27.7.2019

## (Kannambadi, Hosaholalu, Melukote & Kerethonnuru)















# Visited to Oriental Research Institute of UoM - 22.8.2019





## ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಭೇಟಿ




**ಮೈಸೂರು:** ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ವಿದ್ಯಾರ್ಥಿಗಳು ಇತ್ತೀಚೆಗೆ ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯ ಕೇಂದ್ರಕ್ಕೆ ಭೇಟಿ ನೀಡಿದ್ದರು. ವಿದ್ಯಾರ್ಥಿಗಳು ಕೌಟಿಲ್ಯನ ಅರ್ಥಶಾಸ್ತ್ರ ಹಾಗೂ ಇತರೆ ಹಸ್ತ ಪ್ರತಿಗಳ ಐತಿಹಾಸಿಕ ಮಾಹಿತಿಯನ್ನು ಸಂಗ್ರಹಿಸಿದರು. ಸಂಶೋಧನಾಲಯದ ನಿರ್ದೇಶಕ ಡಾ.ಎಸ್. ಶಿವರಾಜಪ್ಪ, ಸಂಶೋಧನಾ ಸಹಾಯಕರಾದ ಡಾ.ಎಂ. ಗೀತಾ, ಡಾ.ಸಿ. ಪಾರ್ವತಿ, ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ ಇದ್ದರು.

---

**ಡಾ. ಶ್ರೀಧರ ಹೆಚ್.** ಮುಖ್ಯಸ್ಥರು, ಇತಿಹಾಸ ವಿಭಾಗ ಇವರು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಸಲ್ಲಿಸಿರುವ ಶ್ರೇಷ್ಠ ಸಾಧನೆಯನ್ನು ಗುರುತಿಸಿ ಆತ್ಮಶ್ರೀ ಕನ್ನಡ ಸಾಂಸ್ಕೃತಿಕ ಪ್ರತಿಷ್ಠಾನ, ಬೆಂಗಳೂರು ಇವರ ವತಿಯಿಂದ ದಿನಾಂಕ 25.8.2019 ರಂದು 2019ನೇ ಸಾಲಿನ **'ಡಾ. ಸರ್ವೇಪಲ್ಲಿ ರಾಧಾಕೃಷ್ಣನ್ ಶಿಕ್ಷಣ ರತ್ನ'** ರಾಜ್ಯ ಪ್ರಶಸ್ತಿ ಪ್ರದಾನ ಮಾಡಲಾಯಿತು.



# 73ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ವಿಶೇಷ ಮಾಹಿತಿ



ಚಿತ್ರ 6.
1947ನೇ ಜುಲೈ 22ನೇ ದಿವಸ
ಸಂವಿಧಾನ ಸಭೆಯಲ್ಲಿ
ಅಂಗೀಕೃತವಾದ ಧ್ವಜ

ಧ್ವಜದ ಬಣ್ಣಗಳ ಅರ್ಥ (ಸಮಿತಿ ತಿಳಿಸಿರುವ ಅರ್ಥ):

ಕೇಸರಿ : ತ್ಯಾಗ, ಪ್ರತಾಪ, ಶೌರ್ಯ= ಲಯ

ಬಿಳಿ : ಶಾಂತಿ, ಪ್ರೇಮ, ಸತ್ಯ= ಸ್ಥಿತಿ

ಹಸಿರು : ಅಧಿಕ ಉತ್ಪನ್ನ, ಪ್ರಗತಿ, ಮುನ್ನಡೆವ ಸೃಷ್ಟಿ

ಅಶೋಕ ಚಕ್ರ = 24 ಅರೆಗಳ ಕಾಲಗತಿ ಸೂಚಕ ವೇಳೆಗೆ ಮಹತ್ವ ಪ್ರಗತಿಕಾರಕ ಮುನ್ನೋಟ, ಸರ್ವರ ಪ್ರತಿನಿಧಿ. ಪರಂಪರಾಗತ ಧರ್ಮ ಸಂಕೇತ.

**ಧ್ವಜದ ಅಳತೆ** : 3:2 ಅಗಲ - ಉದ್ದಗಳಲ್ಲಿ

(ಎಲ್ಲರೂ ಬಳಸಲು ಹಾಗೂ ನಿರ್ದಿಷ್ಟ ಧ್ವಜ)

**ಧ್ವಜದ ಬೇರೆ ಅಳತೆಗಳು :**

3.5 :4 ಉದ್ದ ಅಗಲ

4 : 3 ದೊಡ್ಡದು

6 : 4 ದೊಡ್ಡದು

12 : 6 ಗಡಿ ಪ್ರದೇಶದಲ್ಲಿ ಮಾತ್ರ

ಧ್ವಜ ಕಂಬಗಳು : ಭೂಮಟ್ಟದಿಂದ

ಕನಿಷ್ಠ 18 ಅಡಿ

25 ಅಡಿ

45 ಅಡಿ

75 ಅಡಿ

**ಧ್ವಜದ ಕಟ್ಟೆಗಳು** : ಲೋಕೋಪಯೋಗಿ ಇಲಾಖೆಯಿಂದ ಮಾಡಬೇಕು. ಅವರಿಗೆ ಅಳತೆ ನೀಡಿದೆ.

**ಬಾವುಟ ಹಾರಾಡುವ ಸ್ಥಳ** : ಪಾರ್ಲಿಮೆಂಟ್ ಕಟ್ಟಡ, ಕೇಂದ್ರ ಹಾಗೂ ಕೇಂದ್ರ ರಾಜ್ಯ ಸರ್ಕಾರಗಳ ಕಟ್ಟಡ, ರಾಯಬಾರಿ ಕಚೇರಿ, ಲೋಕಸಭಾ, ರಾಜ್ಯಸಭಾ, ಅಧ್ಯಕ್ಷರ ನಿವಾಸ, ಕೇಂದ್ರ ಸರ್ಕಾರ ಅಧೀನ ಪ್ರದೇಶ, ವಿಧಾನಸಭೆ ವಿಧಾನ ಪರಿಷತ್, ರಾಷ್ಟ್ರಪತಿ ಭವನ, ರಾಜಭವನ, ಗಡಿ ಪ್ರದೇಶಗಳು.

ಕ್ರೀಡಾಕೂಟಗಳು, ಆಗಸ್ಟ್ 15 ದಿನ, ಜನವರಿ 26, ರಾಷ್ಟ್ರ ರಾಜ್ಯ ಸರ್ಕಾರ ಘೋಷಿಸುವ ರಾಷ್ಟ್ರೀಯ ಸಮಾರಂಭ, ಜಯಂತಿ, ಉತ್ಸವ ಹಾಗೂ ರಾಜ್ಯ ದಿನಾಚರಣೆ.

**ಬಾವುಟ ಅರ್ಧ ಮಟ್ಟಕ್ಕೆ** : ರಾಷ್ಟ್ರ ಸರ್ಕಾರ, ರಾಜ್ಯ ಸರ್ಕಾರಗಳು ಘೋಷಿಸುವ ಶೋಕ ಸಂದರ್ಭದಲ್ಲಿ ಮಾತ್ರ ಪೂರ್ಣ ಪ್ರಮಾಣದಲ್ಲಿ ಧ್ವಜವನ್ನು ಹಾರಿಸಿ ತದನಂತರ ಕೆಳಕ್ಕೆ ತಂದು ಕಟ್ಟಬೇಕು. ಇಳಿಸುವಾಗ ಪೂರ್ಣವಾಗಿ ಮೇಲಕ್ಕೆ ತಂದು ತದನಂತರ ನಿಧಾನವಾಗಿ ಇಳಿಸಬೇಕು.

ಶವದ ಮೇಲೆ ರಾಷ್ಟ್ರ ಧ್ವಜ : ರಾಷ್ಟ್ರಪತಿ, ಉಪರಾಷ್ಟ್ರಪತಿ, ಪ್ರಧಾನ ಮಂತ್ರಿ, ಮುಖ್ಯಮಂತ್ರಿ, ಕೇಂದ್ರ ರಾಜ್ಯ ಸಚಿವರು, ಯುದ್ಧ ಭೂಮಿಯಲ್ಲಿ ಮರಣ ಹೊಂದಿದ ಸೈನಿಕ ಅಧಿಕಾರಿಗಳು, ಕೇಂದ್ರ, ರಾಜ್ಯ ಸರ್ಕಾರದಿಂದ ಗೌರವಿಸಲ್ಪಟ್ಟ ವ್ಯಕ್ತಿ, ಸ್ವಾತಂತ್ರ್ಯ ಹೋರಾಟಗಾರರು, ಪುರಸ್ಕಾರ ಪಡೆದ ಗಣ್ಯ ವ್ಯಕ್ತಿ, ರಾಷ್ಟ್ರ ಪ್ರಶಸ್ತಿ ವಿಜೇತರು.

**ಬಾವುಟದ ಸಂಸ್ಕಾರ :**

ಬಾವುಟವು ಹರಿದು ಮಾಸಿದಲ್ಲಿ ಉಪಯೋಗಿಸಬಾರದು.

**ಧ್ವಜ ಸಂಸ್ಕಾರದಲ್ಲಿ ಎರಡು ಪದ್ಧತಿ :**

ಹುದುಗಿಡುವುದು

ದಹನ ಕ್ರಿಯೆ


ಇದನ್ನು ಯಾರೂ ಮಾಡುವ ಹಾಗೆ ಇಲ್ಲ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳು ಘೋಷಣೆ ಮಾಡುವಾಗ ಹಳೆ ಧ್ವಜಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು.

## ಬಾವುಟ ಮುಖ್ಯ ನಿಯಮಗಳು

ಭೂಮಿಗೆ ತಾಕಿಸಬಾರದು

ರಾಷ್ಟ್ರ ಧ್ವಜದ ಕ್ಷೇತ್ರ

ರಾಷ್ಟ್ರ ಧ್ವಜದ ಕ್ಷೇತ್ರ : ಧ್ವಜ ಹಾರಿಸಲು ಗುರುತಿಸಿದ ಪ್ರದೇಶ :




ರಾಷ್ಟ್ರ ಕೇಂದ್ರ, ರಾಜ್ಯ ಕೇಂದ್ರಗಳಲ್ಲಿ ಸೈನಿಕ ಪದ್ಧತಿಯನ್ನು ಅನುಸರಿಸಿದೆ. ಎಲ್ಲಾ ಸೈನಿಕ ದಳಗಳು ಪಾಲ್ಗೊಳ್ಳುತ್ತವೆ. ಕವಾಯತ್ತು, ಪಥಸಂಚಲನ, ವಾದ್ಯ, ರಾಷ್ಟ್ರಗೀತೆ, ಹಾಡುವುದು, ರಾಷ್ಟ್ರೀಯ ಪದ್ಧತಿಯಲ್ಲಿ ಸಾರ್ವಜನಿಕವಾಗಿ ಗೌರವದಿಂದ ಧ್ವಜ ಅರಳಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಸಂಘ -ಸಂಸ್ಥೆಗಳು, ಶಾಲೆಯ ಈ ಕಾರ್ಯಕ್ರಮ ನಡೆಸುತ್ತ, ರಾಷ್ಟ್ರಗೀತೆ, ವಂದೇ ಮಾತರಂ, ಧ್ವಜಗೀತೆಗಳು ಇಲ್ಲಿ ಹಾಡಲ್ಪಡುತ್ತವೆ.



ರಾಷ್ಟ್ರಧ್ವಜ ವಂದನೆಯಲ್ಲಿ ಎರಡು ವಿಧಾನಗಳಿವೆ.

**1. ಸೈನಿತಕ ಪದ್ಧತಿ, 2. ರಾಷ್ಟ್ರೀಯ ಪದ್ಧತಿ**

ರಾಷ್ಟ್ರದ ಧ್ವಜವನ್ನು ವಂದಿಸಲು ಒಂದು ಕ್ರಮವುಂಟು. ಈ ಕ್ರಮವನ್ನು ಮೊದಲು ಜಾರಿಗೆ ಬಂದದ್ದು ಬೆಳಗಾಂ ದೇಶಪಾಂಡೆ ನಗರದಲ್ಲಿ ನಡೆದ "ರಾಷ್ಟ್ರ ಧ್ವಜ ವಂದನಾ" ವಿಧಿಯನ್ನು 1923 ರಲ್ಲಿ ಡಾ. ನಾ.ಸು. ಹರ್ಡೀಕರ್ ನೇತೃತ್ವದಲ್ಲಿ ಕರ್ನಾಟಕದ ಸೇವಾದಲ ಸೇವಕ ಸೇವಕಿಯರಿಂದ ಜಾರಿಗೆ ಬಂತು. ಈ ಬಗ್ಗೆ ಬೇರೆ ಪ್ರಾಂತದವರಿಗೆ ತರಬೇತಿ ನೀಡಿ ಇಡೀ ರಾಷ್ಟ್ರದಲ್ಲಿ ಏಕಮೇವ ರಾಷ್ಟ್ರಧ್ವಜ ವಂದನಾ ಕಾರ್ಯವನ್ನು ನಡೆಸಲು ಕಾರಣವಾಯಿತು. ಶಾಲೆಗಳಲ್ಲಿ ಸಾರ್ವಜನಿಕವಾಗಿ ಈ ಕಾರ್ಯ ಜಾರಿಗೆ ತರಲು ಗ್ರಾಮಾಂತರ, ನಗರ, ಯುವಕ-ಯುವತಿಯರಿಗೆ ಉಪಾಧ್ಯಾಯ-ಉಪಾಧ್ಯಾಯಿನಿಯರಿಗೆ, ಸಂಘ-ಸಂಸ್ಥೆಯ ಕಾರ್ಯಕರ್ತರಿಗೆ ತರಬೇತಿಯನ್ನು ನೀಡಲಾಯಿತು. ಇಂದು ಭಾರತ ಸೇವಾದಲದ ಮೂಲಕ ದೊರಕಿಸಲಾಗುತ್ತದೆ. ಮೇಲೆ ತೋರಿರುವ ಕ್ಷೇತ್ರವನ್ನು ಶಾಲೆಗಳಲ್ಲಿ ಅಳವಡಿಸಲು ಸಹಾಯವಾಗಿದೆ. ಸಂಖ್ಯೆ ಹೆಚ್ಚು ಆದಲ್ಲಿ ವೃತ್ತಗೆರೆಗಳನ್ನು ಹೆಚ್ಚಿಸಿಕೊಳ್ಳಬಹುದು. ಇದರ ವಿವರಣೆ ಈ ಕೆಳಕಂಡಂತೆ ಇದೆ.

**ವಿವರಣೆ :**

1) ಹೊರಗಿನ ಸೀಮಾ ರೇಖೆ, 2) ಸಾಲುಗಳಲ್ಲಿ ನಿಲ್ಲುವ ವೃತ್ತ, (ಸಮವಸ್ತ್ರವಿರಬೇಕು) 3) ಮುಖ್ಯಸ್ಥರುಗಳು ನಿಲ್ಲುವ ಸ್ಥಳ, 4) ಮುಖ್ಯ ಅತಿಥಿಗಳು ನಿಲ್ಲುವ ಸ್ಥಳ, 5,6) ಶಾಲಾ ಮುಖ್ಯಸ್ಥರು, 7) ಧ್ವಜಬಿಂದು, 8,9) ಧ್ವಜ ಹಾಗೂ ಕಹಳೆ ಊದಲು ನಿಲ್ಲುವ ಸ್ಥಳ. 10,11,12,13,14) ಸಮವಸ್ತ್ರಧಾರಿಗಳು, 15,16) ಹೊರಗಿನ ಸೀಮಾ ರೇಖೆ, 17) ಕಾಲುದಾರಿ, 18,19,20) ಆಮಂತ್ರಿತರು ನಿಲ್ಲುವ ಸ್ಥಳ, 21) ವಾದ್ಯಗೋಷ್ಠಿ, 22) ವಾದ್ಯಗೋಷ್ಠಿ, 23,24) ಒಳ, ಹೊರಗೆ ದಾರಿ, ಪ್ರವೇಶ, ಹೊರಕ್ಕೆ ಹೋಗುವ

**ಸರ್ಕಾರದ ಆಜ್ಞೆ:**

ರಾಷ್ಟ್ರ ಗೌರವ ಅಪಮಾನ ವಿರೋಧ ಅಧಿನಿಯಮ 1971 (1971ರ ಅಧಿನಿಯಮದ ಸಂಖ್ಯೆ 69).

ಅಕ್ಟೋಬರ್ 1, 1977 ರಂದು ಜಾರಿಯಲ್ಲಿದ್ದಂತೆ,

1) ಭಾರತ ರಾಷ್ಟ್ರ ಧ್ವಜ ಮತ್ತು ಸಂವಿಧಾನಕ್ಕೆ ಅಪಮಾನ.

2) ರಾಷ್ಟ್ರ ಸಂವಿಧಾನಕ್ಕೆ ಅಪಮಾನ.

3) ರಾಷ್ಟ್ರಗೀತೆಗೆ ಅಪಮಾನ.

ಸಾರ್ವಜನಿಕ ಸ್ಥಳದಲ್ಲಿ ಅಥವಾ ಸಾರ್ವಜನಿಕರಿಗೆ ಕಾಣುವಂತೆ ಅಥವಾ ಭಾರತ ಸಂವಿಧಾನವನ್ನು ಅಥವಾ ಅದರ ಯಾವ ಭಾಗವನ್ನು ಸುಡುವ, ವಿಕೃತಗೊಳಿಸುವ, ವಿರೂಪಗೊಳಿಸುವ, ಅಪವಿತ್ರಗೊಳಿಸುವ, ಕುರೂಪ ಗೊಳಿಸುವ, ನಾಶಪಡಿಸುವ, ತುಳಿಯುವ ಅವಹೇಳನ ಮಾಡುವ ವ್ಯಕ್ತಿಯನ್ನು 3 ವರ್ಷ, 5 ವರ್ಷ ಕಾರಾಗೃಹ ವಾಸ ಹಾಗೂ ದಂಡ, ಇವೆರೆಡರಿಂದಲೂ ದಂಡಿಸಬಹುದು.

ಈ ಕಾನೂನನ್ನು ರಾಷ್ಟ್ರಗೀತೆಗೂ ಅಳವಡಿಸಲಾಗಿದೆ.. ಸರ್ಕಾರದಿಂದ ಆಗಿಂದಾಗ್ಗೆ ಕಾನೂನು ಬದಲಾಗುವುದು ಉಂಟು.

❖ **ಸಂಗ್ರಹ ಮಾಹಿತಿ**

ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




ಸಂಚಿಕೆ: 28 ಜನವರಿ 2020 ಪ್ರಧಾನ ಸಂಪಾದಕರು: ಡಾ. ಎಸ್. ವೆಂಕಟರಾಮು, ಪ್ರಾಂಶುಪಾಲರು www.mahajanafgc.com ಸಂಪಾದಕರು: ಡಾ.ಶ್ರೀಧರ ಹೆಚ್, ಇತಿಹಾಸ ವಿಭಾಗ ಪುಟಗಳು:06

## ಸಂಪಾದಕೀಯ

## ಸಂಶೋಧಕ ಗುರು – ಚಿ.ಮೂ. ಒಂದು ನೆನಪು



ಹಿರಿಯ ಸಂಶೋಧಕ, ಲೇಖಕ ಡಾ. ಎಂ. ಚಿದಾನಂದಮೂರ್ತಿ ಅವರು ಕನ್ನಡ ಪರ ಹೋರಾಟ, ಸಂಶೋಧನ ಕ್ಷೇತ್ರದಲ್ಲಿ ತಮ್ಮದೇ ಛಾಪು ಮೂಡಿಸಿದವರು. ಅವರ ಜೀವನ ಯುವ ಪೀಳಿಗೆಗೆ ಆದರ್ಶಪ್ರಾಯವಾಗಿದೆ.

ತಮ್ಮ ಹೋರಾಟಗಳಲ್ಲಿ ಎಂದಿಗೂ ರಾಜಿಯಾಗದ ಮೂರ್ತಿ ಅವರು ಡಾ. ಎಂ.ಎಂ. ಕಲಬುರ್ಗಿ ಅವರ ಹತ್ಯೆಯನ್ನು ಖಂಡಿಸಿ ಹಲವು ಪ್ರಗತಿ ಪರರು ತಮಗೆ ಸರ್ಕಾರ ನೀಡಿದ್ದ ಪ್ರಶಸ್ತಿಗಳನ್ನು ವಾಪಸ್ ಮಾಡಿದ್ದರು. ಆದರೆ ಮೂರ್ತಿ ಅವರು ತಾವು ಪ್ರಶಸ್ತಿ ವಾಪಸ್ ಮಾಡುವುದಿಲ್ಲ. ಆದರೆ ಕಲಬುರ್ಗಿ ಹತ್ಯೆ ಖಂಡನೀಯ. ತಪ್ಪಿತಸ್ಥರು ಹಿಂದೂ, ಮುಸ್ಲಿಮ್, ಸಿಖ್, ಬೌದ್ಧ... ಹೀಗೆ ಯಾವುದೇ ಧರ್ಮಕ್ಕೆ ಸೇರಿದ್ದರೂ ಶಿಕ್ಷೆಯಾಗಲೇಬೇಕು ಎಂದು ಹೇಳಿದ್ದರು.

ಜನಜಾಗೃತಿಗಾಗಿ 'ಜಲಪ್ರವೇಶ' ಮಾಡಿದ್ದ ಚಿದಾನಂದಮೂರ್ತಿ 1982ರ ಮೊದಲ ತಿಂಗಳುಗಳು ಬೆಂಗಳೂರಿನ ದಂಡು ಪ್ರದೇಶದ ಒಂದು ಸಿನಿಮಾ ಮಂದಿರದಲ್ಲಿ ಮುಂಗಡ ಟಿಕೆಟಿಗಾಗಿ ಸರದಿಯ ಸಾಲಿನಲ್ಲಿ ನಿಂತಿದ್ದ ಗಿಡ್ಡು ಎತ್ತರದ ಒಬ್ಬ ಕನ್ನಡ ಪ್ರಾಧ್ಯಾಪಕರು. "ನಾಲ್ಕು ಟಿಕೆಟ್ ಕೊಡಿ" ಎಂದು ಕೇಳಿದರು. ಕೌಂಟರ್‌ನಲ್ಲಿದ್ದಾತ ಇಂಗ್ಲೀಷ್‌ನಲ್ಲಿ ಮಾತನಾಡಲು ಒತ್ತಾಯಿಸಿದ ಇವರು ಮತ್ತೆ ಕನ್ನಡದಲ್ಲಿ ಕೇಳಿದರು. ಮಾತಿಗೆ ಮಾತು ಬೆಳೆಯಿತು. ಸಿನಿಮಾ ಮಂದಿರದ ಮ್ಯಾನೇಜರ್ ಬಂದು ಕನ್ನಡದಲ್ಲಿ ಮಾತನಾಡಿದ್ದಕ್ಕೆ ಅವರನ್ನು ಆವರಣದಿಂದ ಹೊರಹಾಕಿಸುತ್ತೇನೆ ಎಂದು ಅಬ್ಬರಿಸಿದ ಸುತ್ತಲೂ ಇದ್ದ ಕನ್ನಡಿಗರು ಮೂಕ ಪ್ರೇಕ್ಷಕರಾಗಿ ನೋಡುತ್ತಿದ್ದರು. ಕನ್ನಡಿಗರು ತಮ್ಮ ಆಲಸ್ಯದಿಂದ ನಿರುತ್ಸಾಹದಿಂದ, ನಿರಭಿಮಾನದಿಂದ, ನಿಷ್ಕ್ರಿಯತೆ ಹೊರಬರುವಂತೆ ಜಾಗೃತಿ ಮೂಡಿಸಲು ಬೆಂಗಳೂರಿನಿಂದ ಹಂಪಿಯವರೆಗೆ ಕಾಲ್ನಡಿಗೆಯಲ್ಲಿ ತೆರಳಿ, ತುಂಗಭದ್ರೆಯಲ್ಲಿ ಆತ್ಮಾಹುತಿ ಮಾಡಿಕೊಳ್ಳುವುದಾಗಿ ಜಲಪ್ರವೇಶ ಮಾಡಿದ್ದರು. ಆಗ ಜನರು ಅವರನ್ನು ರಕ್ಷಿಸಿದರು. ಈ ನಿಟ್ಟಿನಲ್ಲಿ ಚಿದಾನಂದ ಮೂರ್ತಿ ಅಪೂರ್ವ ಹೋರಾಟಗಾರರಾಗಿದ್ದರು.

### ಹಿರೇಕೂಗಲೂರಿನಲ್ಲಿ ಜನಿಸಿದ ಮೇರು ಪ್ರತಿಭೆ

ಚಿದಾನಂದಮೂರ್ತಿಗಳು 1931ನೇ ಮೇ 10ನೆಯ ತಾರೀಖಿನಂದು ಶಿವಮೊಗ್ಗ ಜಿಲ್ಲೆಯ ಚೆನ್ನಗಿರಿ ತಾಲ್ಲೂಕಿನ ಹಿರೇಕೂಗಲೂರಿನಲ್ಲಿ ಜನಿಸಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾಭ್ಯಾಸ ಕೋಗಲೂರು. ಸಂತೆಬೆನ್ನೂರುಗಳಲ್ಲಿ ನಡೆದವು. ಇಂಟರ್ ಪರೀಕ್ಷೆಯಲ್ಲಿ ಇಡೀ ರಾಜ್ಯಕ್ಕೆ ಅವರು ಹತ್ತನೆಯ ಸ್ಥಾನಗಳಿಸಿದರು. ಆದರೆ ಮೆಡಿಕಲ್, ಇಂಜಿನಿಯರಿಂಗ್ ಸೇರದೆ ಕನ್ನಡ ಆನರ್ಸ್ ಸೇರಿದರು. ಅಂದಿನ ಪ್ರಸಿದ್ಧ ಅಧ್ಯಾಪಕರ ಮಾರ್ಗದರ್ಶನದಲ್ಲಿ ಪ್ರಥಮ ಶ್ರೇಣಿ ಅಲ್ಲದೆ 1935ರಲ್ಲಿ ಆರು ಆನರ್ಸ್ ಚಿನ್ನದ ಪದಕ ಕೂಡ ಪಡೆದರು.

ಎಂ.ಎ. ಓದುವಾಗಲೇ ಡಿ.ಎಲ್. ನರಸಿಂಹಾಚಾರ್ಯರ ಸೂಚನೆಯ ಮೇರೆಗೆ ಪಂಪನಿಗೆ ಹಿನ್ನೆಲೆಯಾಗಿದ್ದ ಸಾಮಾಜಿಕ ಬದುಕನ್ನು ಶಾಸನಗಳನ್ನು ಆಧರಿಸಿ ಪುನರ್‌ರಚಿಸುವ ಪ್ರಯತ್ನಕ್ಕೆ ಮೂರ್ತಿಗಳು ತೊಡಗಿದರು ಅದರ ಫಲವಾಗಿ ಬಂದ ಲೇಖಕ 'ಪಂಪಕವಿ ಮತ್ತು ಮೌಲ್ಯ ಪ್ರಸಾರ' ಆ ಮೂಲಕ ಶಾಸನ ಕ್ಷೇತ್ರದೆಡೆಗೆ ಹೊರಳಿದ ಮೂರ್ತಿಗಳು 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎಂಬ ಪ್ರಬಂಧ ಸಿದ್ಧಪಡಿಸಿ ತೀ.ನಂ.ಶ್ರೀಕಂಠಯ್ಯನವರ ಮಾರ್ಗದರ್ಶನದಲ್ಲಿ 1964ರಲ್ಲಿ ಪಿ.ಎಚ್‌ಡಿ ಪದವಿ ಪಡೆದರು. ಈ ಪ್ರಬಂಧ ಕನ್ನಡ ಸಂಶೋಧನ ಕ್ಷೇತ್ರದ ಮಹತ್ವಪೂರ್ಣ ಕೃತಿಯಾಗಿದೆ.

### ಮೈಸೂರಿನೊಂದಿಗಿನ ನಂಟು

ಡಾ. ಎಂ. ಚಿದಾನಂದಮೂರ್ತಿ ಅವರ ಜೀವನದಲ್ಲಿ ಮೈಸೂರು ಕೂಡ ಅವಿಭಾಜ್ಯ ಅಂಗವಾಗಿದೆ. 1957ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಕನ್ನಡ ಎಂ.ಎ. ಪದವಿಯಲ್ಲಿ ಪ್ರಥಮ

**ಪು.ತಿ.ನೋ.**



ರ‍್ಯಾಂಕ್ ಗಳಿಸಿದರು. ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇವರು ಕುವೆಂಪು, ಮತಿನ ಹಾಗೂ ರಾಘವಚಾರ್ ಅವರಂತಹ ಕನ್ನಡದ ಮಹಾ ಸಾಹಿತಿಗಳ ಪ್ರಭಾವಕ್ಕೆ ಒಳಗಾದರು.

ಚಿದಾನಂದಮೂರ್ತಿ ಅವರು 1957ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜಿನ ಅಧ್ಯಾಪಕರಾಗಿ ನೇಮಕಗೊಂಡರು. 1960ರ ಹೊತ್ತಿಗೆ ಮೈಸೂರಿನ ಮಾನಸಗಂಗೋತ್ರಿಯ ಸ್ನಾತಕೋತ್ತರ ಕನ್ನಡ ವಿಭಾಗದ ಅಧ್ಯಾಪಕರಾದರು. 1968ರ ವರೆಗೆ ಅಧ್ಯಾಪಕರಾಗಿ ಕನ್ನಡ ರೀಡರ್ ಆಗಿ ಸೇವೆಸಲ್ಲಿಸಿದರು. ಅವರು ಮೈಸೂರಿನಲ್ಲಿ ಕನ್ನಡ ಆನರ್ಸ್ ಪದವಿ ವ್ಯಾಸಂಗ ಮಾಡುವಾಗ ಸುತ್ತೂರು ಸಂಸ್ಥಾನದ ವಿದ್ಯಾರ್ಥಿನಿಲಯದಲ್ಲಿ ಆಶ್ರಯದಲ್ಲಿದ್ದರು.

### ವೃತ್ತಿ ಜೀವನ

ಡಾ. ಎಂ. ಚಿದಾನಂದಮೂರ್ತಿ ಅವರು 1957ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಯುವರಾಜ ಕಾಲೇಜಿನಲ್ಲಿ ಅಧ್ಯಾಪಕರಾದರು 1960ರ ಹೊತ್ತಿಗೆ ಮೈಸೂರಿನ ಮಾನಸಗಂಗೋತ್ರಿಯ ಸ್ನಾತಕೋತ್ತರ ಕನ್ನಡ ವಿಭಾಗದ ಅಧ್ಯಾಪಕರಾದರು. 1968ರವರೆಗೆ ಅಲ್ಲಿ ಅಧ್ಯಾಪಕರಾಗಿ ಕನ್ನಡ ರೀಡರ್ ಆಗಿದ್ದು, ಬಳಿಕ ಬೆಂಗಳೂರು ವಿಶ್ವವಿದ್ಯಾನಿಲಯವನ್ನು ಸೇರಿದರು. ಚಿದಾನಂದ ಮೂರ್ತಿ ಅವರು ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದರು. 1990 ಅಕ್ಟೋಬರ್ ತಿಂಗಳ ಸ್ವಯಂಸೇವಾ ಕನ್ನಡ ಸಂಶೋಧನಾ ಕ್ಷೇತ್ರದಲ್ಲಿ ಚಿದಾನಂದಮೂರ್ತಿ ಅವರದು ಚಿರಸ್ಮರಣೀಯವಾದ ದೊಡ್ಡ ಹೆಸರು. ಸುಮಾರು ನಾಲ್ಕು ದಶಕಗಳವರೆಗೆ ಅವರು ಸಂಶೋಧನಾ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾ ಸಂಶೋಧನೆಗಳ ಕುರಿತಾದ ಮಹತ್ವದ ಬರಹಗಳನ್ನು ಪ್ರಕಟಿಸಿದ್ದಾರೆ.

### 25ಕ್ಕೂ ಹೆಚ್ಚು ಕೃತಿಗಳ ರಚನೆ

ಚಿದಾನಂದಮೂರ್ತಿ ಅವರು ಇಪ್ಪತ್ತೈದಕ್ಕೂ ಹೆಚ್ಚು ಪುಸ್ತಕಗಳು ನಾನೂರಕ್ಕೂ ಹೆಚ್ಚು ಪ್ರೌಢ ಪ್ರಬಂಧಗಳನ್ನು ರಚಿಸಿದ್ದಾರೆ. ಭಾಷೆ, ವ್ಯಾಕರಣ, ಸ್ಥಳನಾಮ, ಛಂದಸ್ಸು, ಗ್ರಂಥ ಸಂಪಾದನೆ, ಸಾಹಿತ್ಯ ಚರಿತ್ರೆ, ಜಾನಪದ, ಶಾಸನ, ಕರ್ನಾಟಕ ಇತಿಹಾಸ, ಸಂಸ್ಕೃತಿ ಹೀಗೆ ಹಲವಾರು ಕ್ಷೇತ್ರಗಳಲ್ಲಿ ಸಂಶೋಧನೆ ಕೈಗೊಂಡಿದ್ದಾರೆ.

ಅವರು 1960ರ ದಶಕಗಳಲ್ಲಿ ತಾವು ಪ್ರಕಟಿಸಿದ ಹಲವಾರು ಲೇಖನಗಳಲ್ಲಿ ಉಂಬರಿ, ಇರ್, ಡುಂಡುಚಿ ಅಮ್ಮ, ಅಬ್ಬೆ, ಅಲ್ಲಮ, ಬಾಮಬ್ಬೆ ಶಬ್ದಗಳನ್ನು ಕನ್ನಡ ಭಾಷೆ, ವ್ಯಾಕರಣ, ಅವಸ್ಥಾಂತರಗಳ ಹಿನ್ನೆಲೆಯಲ್ಲಿ ಪರಿಶೀಲಿಸಿದ್ದಾರೆ. ಅನಂತರ ಭಾಷಾ ವಿಜ್ಞಾನದ ಮೂಲತತ್ವಗಳು (1965), ವಾಗಾರ್ಥ (1981) ಎಂಬ ಎರಡು ಮುಖ್ಯವಾದ ಅವರ ಭಾಷಾ ಸಂಬಂಧವಾದ ಕೃತಿಗಳು ಪ್ರಕಟವಾದವು.

### ಹಂಪಿ ವಿವಿ ಸ್ಥಾಪನೆಯಲ್ಲಿ ಪಾತ್ರ

ಕನ್ನಡದ ಬಗೆಗಿನ ಚಿದಾನಂದಮೂರ್ತಿಗಳ ಚರಿತ್ರಾರ್ಹ ಸಾಧನೆ ಎಂದರೆ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾನಿಲಯದ ಸ್ಥಾಪನೆ 1985ರಲ್ಲಿ ಕನ್ನಡಿಗರ ಜಾಗೃತಿಗಾಗಿ ಕಾಲ್ನಡಿಗೆಯ ಮೂಲಕ ಬೆಂಗಳೂರಿನಿಂದ ಹಂಪಿಗೆ ಪ್ರಯಾಣ ಮಾಡುವಾಗ ಮೂರ್ತಿ ಅವರಿಗೆ ಕನ್ನಡಕ್ಕೆ ಏಕೆ ಒಂದು ಪ್ರತ್ಯೇಕ ವಿಶ್ವವಿದ್ಯಾನಿಲಯ ಅಸ್ತಿತ್ವಕ್ಕೆ ಬರಬಾರದು ಎನಿಸಿತು. ಸಾಹಿತಿಗಳ, ಕಲಾವಿದರ ಬಳಗದ ಮೂಲಕ ಆಗಿನ ಮುಖ್ಯಮಂತ್ರಿ, ಸಚಿವ ಸಂಪುಟ, ಶಾಸಕರ ಮೇಲೆ ಒತ್ತಾಯ ತಂದು ಅದರ ಸ್ಥಾಪನೆಗೆ ಓಡಾಡಿ ಮುಂದಿನ ಒಂದೆರಡು ವರ್ಷಗಳಲ್ಲಿ ಅದರ ಕಾರ್ಯರಂಭಕ್ಕೆ ಕಾರಣರಾದರು.

### ಕನ್ನಡ ಚಳುವಳಿಗೆ ಚಿಮೂ ಚೈತನ್ಯ


1982ರಲ್ಲಿ ಗೋಕಾಕ್ ವರದಿಯ ಜಾರಿಗೆ ಕನ್ನಡ ಸಾಹಿತಿಗಳು, ಕಲಾವಿದರು ಹೋರಾಟ ಹೂಡಿದರು ಅದೇ ವರ್ಷದ ಏಪ್ರಿಲ್ 13 ರಂದು ಸಾಹಿತಿಗಳ ಮತ್ತು ಕಲಾವಿದರ ಬಳಗ ಅಸ್ತಿತ್ವಕ್ಕೆ ಬಂದಿತು. ಚಿದಾನಂದ ಮೂರ್ತಿಯವರು ಕನ್ನಡ ಚಳವಳಿಯ ಹೊಸ ನಾಯಕರಾದರು. ಗೋಕಾಕ್ ಚಳವಳಿಯಲ್ಲಿ ಮೂರ್ತಿ ಅವರು ತೋರಿದ ಕ್ರಿಯಾಶೀಲತೆ, ಹಿರಿಯರನ್ನು, ಕಿರಿಯರನ್ನು ಪ್ರೋತ್ಸಾಹಿಸಿ ತಮ್ಮೊಂದಿಗೆ ಕೊಂಡೊಯ್ದ ರೀತಿ ಕನ್ನಡ ಚಳವಳಿಗೆ ಹೊಸ ಆಯಾಮ, ರೂಪ, ವರ್ಚಸ್ಸು, ಗೌರವಗಳನ್ನು ತಂದಿತ್ತವು. 1988ರಲ್ಲಿ ಚಿದಾನಂದಮೂರ್ತಿ 'ಕನ್ನಡ ಶಕ್ತಿಕೇಂದ್ರವನ್ನು' ಅಸ್ತಿತ್ವಕ್ಕೆ ತಂದರು. ಕನ್ನಡ ಶಕ್ತಿ ಕೇಂದ್ರ ಕರ್ನಾಟಕದಾದ್ಯಂತ ವ್ಯಾಪಿಸಿ ಸಂಘಟನೆಗಳ ಶಾಖೆಗಳು ಜಿಲ್ಲಾ ಮಟ್ಟಗಳಲ್ಲಿ ಆರಂಭಗೊಂಡವು. ಕನ್ನಡದ ಕಾರಣಕ್ಕಾಗಿಯೇ ರಾಜ್ಯಾದ್ಯಂತ ವ್ಯಾಪಿಸಿದ ಏಕೈಕ ಸಂಘಟನೆ ಇದೊಂದೇ. ಇದೆಲ್ಲದರ ಜೊತೆಗೆ ಚಿದನಂದಾಮೂರ್ತಿ ಅವರು ಕರ್ನಾಟಕ ಇತಿಹಾಸ ಮತ್ತು ಸಂಸ್ಕೃತಿ ಹಾಗೂ ಐತಿಹಾಸಿಕ ಶಾಸನ ಸಂಶೋಧನಾ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳು ಅಪಾರ, ಅನನ್ಯ ಮತ್ತು ಜೀವಂತ ಸಾಕ್ಷಿಗಳಾಗಿವೆ.

**– ಡಾ. ಶ್ರೀಧರ ಹೆಚ್.**
ಮುಖ್ಯಸ್ಥರು, ಇತಿಹಾಸ ವಿಭಾಗ

## ಇತಿಹಾಸ ಕುರಿತಂತೆ – ಚಿ.ಮೂ.

## 'ಇತಿಹಾಸ ಅರಿಯದವನು ಇಂದು ಬದುಕಲಾರ, ನಾಳೆಯನ್ನು ಕಟ್ಟಲಾರ'





## ಖ್ಯಾತ ಇತಿಹಾಸ ತಜ್ಞ ಡಾ. ಎ.ಕೆ. ಶಾಸ್ತ್ರಿ ಒಂದು ನೆನಪು

ಇತಿಹಾಸ ಅಧ್ಯಯನಕ್ಕೆ ಬಹುಮುಖ್ಯ ಆಕರವಾಗಿರುವ ಕಡತಗಳ ಮೇಲೆ ವಿಶೇಷ ಅಧ್ಯಯನ ನಡೆಸಿದ್ದ ಶಾಸ್ತ್ರಿಯವರು, 'ಕರ್ನಾಟಕದ ಕಡತ ಶಾಸ್ತ್ರಿ' ಎಂದೇ ಪ್ರಚಲಿತರಾಗಿದ್ದರು. ಶೃಂಗೇರಿ, ಚಿತ್ರಾಪುರ, ಗೋಕರ್ಣ, ಸ್ವರ್ಣವಲ್ಲಿ, ಬನವಾಸಿ, ಮಂಜುಗುಣಿ ಮೊದಲಾದ ಧಾರ್ಮಿಕ ಕ್ಷೇತ್ರಗಳ ಕಡತ, ತಾಡೋಲೆಗಳಲ್ಲಿರುವ ಮೋಡಿ ಲಿಪಿಯನ್ನು ಅಧ್ಯಯನ ಮಾಡಿ, ಸ್ಥಳ ಚರಿತ್ರೆಗಳ ಗ್ರಂಥ ಪ್ರಕಟಿಸಿದ್ದರು.

ಇಂಗ್ಲಿಷ್ ಹಾಗೂ ಕನ್ನಡ ಎರಡೂ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದ್ದ ಅವರು, 30ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. 'ಶೃಂಗೇರಿಯ ಇತಿಹಾಸ', 'ಕನ್ನಡದಲ್ಲಿ ಕಡತಗಳು', 'ಶೃಂಗೇರಿ ಮಠದ ಕಡತಗಳಲ್ಲಿ ಆಯ್ದ ಚಾರಿತ್ರಿಕ ದಾಖಲೆಗಳು', 'A History of Sringeri', 'The records of the Sringeri matha', 'Relating to Keladi', 'Keladi museum' ಪ್ರಮುಖವಾದವು.

ಭಾರತೀಯ ಇತಿಹಾಸ ಅನುಸಂಧಾನ ಪರಿಷತ್‌ನ ಸಂಶೋಧನಾ ಕಾರ್ಯದ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದರು. 2002ರಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿಯ 16ನೇ ಸಮ್ಮೇಳನ, 2006ರಲ್ಲಿ ಕರ್ನಾಟಕ ಹಿಸ್ಟರಿ ಕಾಂಗ್ರೆಸ್‌ನ 18ನೇ ಸಮ್ಮೇಳನ, 2009ರಲ್ಲಿ ರಾಷ್ಟ್ರ ಮಟ್ಟದ ಇತಿಹಾಸ ಸಮ್ಮೇಳನದ ಅಧ್ಯಕ್ಷರಾಗಿದ್ದರು. 2015ರಲ್ಲಿ ಅವರಿಗೆ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್‌ನ ಶತಮಾನೋತ್ಸವ ಗೌರವ ಪ್ರಶಸ್ತಿ ಲಭಿಸಿತ್ತು.

– ಡಾ. ಧರ್ಮೇಶ ಎ.ಜಿ.
ಅಧ್ಯಾಪಕರು, ಇತಿಹಾಸ ವಿಭಾಗ

# ಬೃಹತ್ ಶಿಲಾಯುಗದ ಸಮಾಧಿಗಳು ಪತ್ತೆ

## ಮೈಸೂರು ತಾಲೂಕು ಇಲವಾಲ ಹೋಬಳಿಯಿಂದ 8 ಕಿ.ಮೀ ದೂರದಲ್ಲಿರುವ ಕಲ್ಲೂರು ನಾಗನಹಳ್ಳಿಯಲ್ಲಿ ಶೋಧ

• ಕನ್ನಡಪ್ರಭ ವಾರ್ತೆ ಮೈಸೂರು

ಮೈಸೂರು ತಾಲೂಕು ಇಲವಾಲ ಹೋಬಳಿಯಿಂದ 8 ಕಿ.ಮೀ ದೂರದಲ್ಲಿರುವ ಗ್ರಾಮವಾದ ಕಲ್ಲೂರು ನಾಗನಹಳ್ಳಿಯಲ್ಲಿ ಇತಿಹಾಸ ಕ್ಷೇತ್ರ.. ಅಧ್ಯಯನಕ್ಕೆ ವೇಳೆ ಸುಮಾರು 3000 ವರ್ಷಗಳ ಕಾಲದ ಅಪರೂಪದ ಬೃಹತ್ ಶಿಲಾಯುಗ ಸಂಸ್ಕೃತಿಯ ಸಮಾಧಿಗಳ ನಮೂನೆಗಳಲ್ಲಿ ಒಂದಾದ ಹಾಸು ಬಂಡೆ ಸಮಾಧಿಗಳು (ಡಾಲ್ಮೇನ್) 7 ಶೋಧವಾಗಿವೆ.

ಮೈಸೂರಿನ ಕುವೆಂಪುನಗರ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಇತಿಹಾಸ ಸಹ ಪ್ರಾಧ್ಯಾಪಕರಾದ ಎನ್‌ಎಸ್‌ಎಸ್ ಅಧಿಕಾರಿ ಡಾ.ಎಸ್.ಜಿ. ರಾಮದಾಸ ರೆಡ್ಡಿ, ಉಪನ್ಯಾಸಕ ಚರಣ್ ಕುಮಾರ್ ಹಾಗೂ ಕಾಲೇಜಿನ ಎನ್‌ಎಸ್‌ಎಸ್ ಸ್ವಯಂ ಸೇವಕರೊಡನೆ ಗ್ರಾಮಕ್ಕೆ ಹೋದಾಗ ಏಳು ಮಾಸ್ತಮ್ಮ ಗುಡಿಗಳಿವೆ ಎಂದು ತಿಳಿದು, ಗುಡಿಗಳ ಹತ್ತಿರ ಹೋದಾಗ 7 ಗುಡಿಗಳು ಗಿಡ, ಗಂಟೆ, ಬಳ್ಳಿಗಳಿಂದ ಮುಚ್ಚಿ ಹೋಗಿದ್ದವು. ಸ್ಥಳೀಯರಾದ ಪುನೀತ್, ಯೋಗಣ್ಣ ಹಾಗೂ ತುಳಸಿರಾಮ್ ಅವರ ಸಹಕಾರದಿಂದ ಸ್ವಚ್ಛಗೊಳಿಸಿ ಗಮನಿಸಿದಾಗ 7 ಹಾಸು ಬಂಡೆ ಸಮಾಧಿಗಳು(ಡಾಲ್ಮೇನ್) ಪತ್ತೆಯಾಗಿವೆ.



ಕಲ್ಲೂರು ನಾಗನಹಳ್ಳಿಯಲ್ಲಿ ಪತ್ತೆ.

ಕೆ.ಆರ್. ಸಾಗರದಿಂದ ಕೆ.ಆರ್. ನಗರಕ್ಕೆ ಹೋಗುವ ರಸ್ತೆಯ ಪಕ್ಕದಲ್ಲಿ ಸಮಾಧಿಗಳು ಇವೆ. ಇವುಗಳನ್ನು ಎಲ್ ಆಕಾರದಲ್ಲಿ ಸಾಲಾಗಿ ನಿರ್ಮಿಸಿದ್ದಾರೆ. ಈ ಸಮಾಧಿಗಳು ದಕ್ಷಿಣಕ್ಕೆ ಮುಖಮಾಡಿ ಮೂರು, ಉಳಿದ ನಾಲ್ಕು ಸಮಾಧಿಗಳು ಪೂರ್ವಾಭಿಮುಖವಾಗಿವೆ. ಒಟ್ಟು 7 ಸಮಾಧಿಗಳ ಉದ್ದ 84 ಅಡಿ, ಅಗಲ 8.5 ಅಡಿ ಇವೆ. ಪ್ರತಿ ಸಮಾಧಿ 12 ಅಡಿ ಉದ್ದ, 8.5 ಅಡಿ ಅಗಲ ಇದೆ. ಈ ಸಮಾಧಿಗಳನ್ನು ಸ್ಥಳೀಯವಾಗಿ ಸಿಗುವ ಕಲ್ಲು ಬಂಡೆಗಳನ್ನು ಬಳಸಿ ನಿರ್ಮಿಸಿದ್ದಾರೆ. ಪ್ರತಿ ಸಮಾಧಿಯನ್ನು ಗುಡಿಯಾಕಾರದಲ್ಲಿ ಕಟ್ಟಿ ಸುತ್ತಲೂ ಬಂಡೆಗಳನ್ನು ನಿಲ್ಲಿಸಿ ಅವುಗಳ ಮೇಲೆ 6.5 ಅಡಿ ಉದ್ದದ ಹಲವು ಬಂಡೆಗಳನ್ನು ಹಾಸಿದ್ದಾರೆ. ನಂತರ ಬಂಡೆಗಳನ್ನು ಸುತ್ತುವರಿದು ಸ್ಥಳೀಯವಾಗಿ ಸಿಗುವ ಕಲ್ಲುಗಳನ್ನು ಬಳಸಿ ಕಟ್ಟಡ ಕಟ್ಟಿದ್ದಾರೆ.

ಗ್ರಾಮದಲ್ಲಿ 11 ವೀರಮಾಸ್ತಿಕಲ್ಲುಗಳಿದ್ದು ಅವುಗಳಲ್ಲಿ ವಿಶೇಷವಾದ ವೆಣ್ಣುಯ್ಯಲ್ ವೀರಗಲ್ಲು, ತುರುಗಳ್ಳರವೀರಗಲ್ಲು, ಮಾಸ್ತಿಕಲ್ಲು, ಒಕ್ಕೈ ಮಾಸ್ತಿಕಲ್ಲು ಇತರೆ ಶಿಲ್ಪಗಳು ಹಾಗು ಹೊಯ್ಸಳರ ಕಾಲದ ಬ್ರಹ್ಮಲಿಂಗೇಶ್ವರ ದೇವಾಲಯ ಗ್ರಾಮದಲ್ಲಿವೆ. ಇವೆಲ್ಲ ಗ್ರಾಮದ ಇತಿಹಾಸದ ಮೇಲೆ ಹಾಗೂ ಕರ್ನಾಟಕದ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಅಂಶಗಳಾಗಿದ್ದು ಸಂರಕ್ಷಿಸುವ ಅಗತ್ಯತೆಯಿದೆ ಎಂದು ಡಾ.ಎಸ್.ಜಿ. ರಾಮದಾಸ ರೆಡ್ಡಿ ತಿಳಿಸಿದ್ದಾರೆ.

### ಅಪರೂಪದ ಸಮಾಧಿಗಳು

ಇವು ವಿಶೇಷವಾದ ಹಾಗೂ ಕರ್ನಾಟಕದಲ್ಲೇ ಅಪರೂಪದ ಸಮಾಧಿಗಳಾಗಿವೆ. ಇದೇ ತರಹದ ಸಮಾಧಿಗಳು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಸೋಮಗುದ್ದು ಗ್ರಾಮದಲ್ಲಿ ಶೋಧ ಆಗಿವೆ. ಹಾಗೂ ಕರ್ನಾಟಕ, ತಮಿಳುನಾಡು, ಆಂಧ್ರ ಪ್ರದೇಶ, ಕೇರಳ ರಾಜ್ಯಗಳಲ್ಲಿ ಕಂಡು ಬಂದಿವೆ. ಈ ಸಮಾಧಿಗಳಿಗೆ ಪ್ರತಿ ವರ್ಷ ಇಡೀ ಗ್ರಾಮದ ಜನ ಶಿವರಾತ್ರಿ ಅಮವಾಸ್ಯೆಯ ದಿನ 7 ಮಾಸ್ತಮ್ಮರೆಂದು ಭಕ್ತಿಭಾವದಿಂದ ಪೂಜೆ ಮಾಡುತ್ತಾರೆ ಎಂದು ಗ್ರಾಮದ ಮುಖಂಡ ಯೋಗಣ್ಣ ತಿಳಿಸಿದರು.



## ಡಾ. ಶ್ರೀಧರ ಹೆಚ್ ಅವರಿಗೆ 'ಬೆಸ್ಟ್ ಲಕ್ಚರರ್ ಆಫ್ ಹಿಸ್ಟರಿ' ಪ್ರಶಸ್ತಿ ಪ್ರದಾನ




ಇತ್ತೀಚೆಗೆ **ಯೂತ್ ಎಫರ್ಟ್ಸ್ ಫಾರ್ ಸೊಸೈಟಿ (YES) ಟ್ರಸ್ಟ್** (ರಿ.), **ಬೆಂಗಳೂರು, A Unit of Non Governmental Organization Registered with Indian Trust Act 1882, NITI AAYOG Govt. of India, UNESCO and WANGO USA An ISO 9001:2015 Certified** ಇವರ ವತಿಯಿಂದ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರಾದ **ಡಾ. ಶ್ರೀಧರ ಹೆಚ್** ಅವರಿಗೆ ಶಿಕ್ಷಣ ಕ್ಷೇತ್ರ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕ್ಷೇತ್ರದಲ್ಲಿನ ಶ್ರೇಷ್ಠ ಸೇವೆಗಾಗಿ 2019ರ ಸಾಲಿನ **'ಕರ್ನಾಟಕ ಎಜುಕೇಷನಲ್ ಅವಾರ್ಡ್ ಫಾರ್ 'ಬೆಸ್ಟ್ ಲೆಕ್ಚರರ್ ಆಫ್ ಹಿಸ್ಟರಿ'** ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಲಾಯಿತು

## ಡಾ. ಶ್ರೀಧರ ಹೆಚ್ ಅವರಿಗೆ "ಕರುನಾಡ ರತ್ನ" ರಾಜ್ಯ ಪ್ರಶಸ್ತಿ ಪ್ರದಾನ



### ಡಾ.ಎಚ್. ಶ್ರೀಧರಗೆ ಕರುನಾಡ ರತ್ನ ಪ್ರಶಸ್ತಿ

**ಮೈಸೂರು:** ಕರ್ನಾಟಕ ಕಲಾ ಸಾಂಸ್ಕೃತಿಕ ಪ್ರತಿಷ್ಠಾನ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಸಲ್ಲಿಸಿರುವ ಅಮೂಲ್ಯ ಸೇವೆಯನ್ನು ಪರಿಗಣಿಸಿ ನೀಡುವ 2019ನೇ ಸಾಲಿನ



ಕರುನಾಡ ರತ್ನ ಪ್ರಶಸ್ತಿಗೆ ಮೈಸೂರಿನ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ ಅವರು ಭಾಜನರಾಗಿದ್ದಾರೆ. ಡಿ.7ರ ಬೆಳಗ್ಗೆ 10.30ಕ್ಕೆ ಜೆಎಸ್‌ಎಸ್ ಆಸ್ಪತ್ರೆಯ ಆವರಣದಲ್ಲಿರುವ ಡಾ. ಶಿವ ರಾತ್ರಿ ರಾಜೇಂದ್ರ ಭವನದಲ್ಲಿ ನಡೆಯುವ ಅಭಿನಂದನಾ ಕಾರ್ಯಕ್ರಮದಲ್ಲಿ ಡಾ. ಶ್ರೀಧರ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಕಾಲೇಜಿನ ಪ್ರಾಂಶುಪಾಲ ಡಾ.ಎಸ್. ವೆಂಕಟರಾಮು ತಿಳಿಸಿದ್ದಾರೆ.

**ಮೈಸೂರು ವಿಶ್ವವಿದ್ಯಾನಿಲಯದ ಯು.ಜಿ.ಸಿ. – ಹೆಚ್.ಆರ್.ಡಿ.ಸಿ. ವತಿಯಿಂದ**
**ದಿನಾಂಕ 20.12.2019 ರಿಂದ 03.01.2020 ರವರೆಗೆ ಆಯೋಜಿಸಿದ**
**'ಪುನಶ್ಚೇತನ ಕಾರ್ಯಾಗಾರದಲ್ಲಿ' (Refresher Course)**
**ಇತಿಹಾಸ ವಿಭಾಗದ ಮುಖ್ಯಸ್ಥರಾದ**
**ಡಾ. ಶ್ರೀಧರ ಹೆಚ್. ಅವರು ಭಾಗವಹಿಸಿದ್ದರು.**





**ಬರಡನ ಪುರ ಗ್ರಾಮದಲ್ಲಿ ಆಯೋಜಿಸಿದ ವಾರ್ಷಿಕ ರಾ.ಸೇ.ಯೋ. ಶಿಬಿರದಲ್ಲಿ**
**ರಾಷ್ಟ್ರೀಯ ಸೇವಾ ಯೋಜನೆ ಮತ್ತು ಇತಿಹಾಸ ವಿಭಾಗಗಳ ಸಹಯೋಗದಲ್ಲಿ ಏರ್ಪಡಿಸಿದ್ದ**
**ಜಾಗೃತಿ ಕಾರ್ಯಕ್ರಮ – 7.1.2020**

**ವಿಷಯ: ಪಾರಂಪರಿಕ ಕಟ್ಟಡಗಳು ಮತ್ತು ಸ್ಮಾರಕಗಳ ನಡುವಿನ ವ್ಯತ್ಯಾಸ ಮತ್ತು ಪ್ರಾಮುಖ್ಯತೆ**
**ಸಂಪನ್ಮೂಲ ವ್ಯಕ್ತಿ: ಡಾ. ಎಸ್. ರಂಗರಾಜು, ನಿವೃತ್ತ ಇತಿಹಾಸ ಪ್ರಾಧ್ಯಾಪಕರು, ಮೈಸೂರು ವಿಶ್ವವಿದ್ಯಾನಿಲಯ**
**ಹಾಗೂ ನೋಡಲ್ ಅಧಿಕಾರಿಗಳು, ಸಮುದಾಯ ಕಾಲೇಜು, ಮಹಾಜನ ಪ್ರಥಮ ದರ್ಜೆ ಕಾಲೇಜು, ಮೈಸೂರು.**
**ಅಧ್ಯಕ್ಷತೆ: ಡಾ. ಶ್ರೀಧರ ಹೆಚ್., ಮುಖ್ಯಸ್ಥರು, ಇತಿಹಾಸ ವಿಭಾಗ, ಮಹಾಜನ ಪ್ರಥಮ ದರ್ಜೆ ಕಾಲೇಜು, ಮೈಸೂರು.**





**ಇತಿಹಾಸ ವಿಭಾಗ ಮತ್ತು ಎಂಟ್ರಿ ಟು ಸರ್ವೀಸ್ ಘಟಕಗಳ ವಿದ್ಯಾರ್ಥಿಗಳು ದಿನಾಂಕ 19.12.2019 ರಂದು ಪ್ರಜಾವಾಣಿ ದಿನಪತ್ರಿಕೆ ಹಾಗೂ ನವೋದಯ ಫೌಂಡೇಷನ್ (ರಿ.) ಮೈಸೂರು ಇವರ ಸಹಯೋಗದಲ್ಲಿ ಯು.ಪಿ.ಎಸ್.ಸಿ. ಮತ್ತು ಕೆ.ಪಿ.ಎಸ್.ಸಿ. ಹುದ್ದೆಗಳ ಪರೀಕ್ಷಾ ಸಿದ್ಧತೆಯ ಒಂದು ದಿನದ ಕಾರ್ಯಾಗಾರದಲ್ಲಿ ಭಾಗವಹಿಸಿ ಸದುಪಯೋಗ ಪಡೆದುಕೊಂಡರು.**









**ಕಾಲೇಜಿನ ಮಹಾಜನ ಸ್ವಯಂಸೇವಕ ಘಟಕ (VOMC), ಸ್ವಚ್ಛ ಭಾರತ ಸಮಿತಿ, ವಿದ್ಯಾರ್ಥಿ ಸಂಸತ್ ಘಟಕಗಳ ವಿದ್ಯಾರ್ಥಿಗಳು 'ಮಹಾ ಮೈಸೂರು ಪ್ಲಾಗತಾನ್' ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.**





ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




ಸಂಚಿಕೆ: 29 ಮಾರ್ಚ್ 2020 | ಪ್ರಧಾನ ಸಂಪಾದಕರು: ಡಾ. ಎಸ್. ವೆಂಕಟರಾಮು, ಪ್ರಾಂಶುಪಾಲರು | www.mahajanafgc.com | ಸಂಪಾದಕರು: ಡಾ.ಶ್ರೀಧರ ಹೆಚ್, ಇತಿಹಾಸ ವಿಭಾಗ | ಪುಟಗಳು: 08

**ಸಂಪಾದಕೀಯ**

## ಶತಮಾನೋತ್ಸವ ಸಂಭ್ರಮದಲ್ಲಿ – ಬೆಂಗಳೂರು ಕ್ಯಾಲೆಂಡರ್

ಕ್ಯಾಲೆಂಡರ್ ಎಂದ ಕೂಡಲೇ ಜನರ ಮನದಲ್ಲಿ ಬರುವುದು 'ಬೆಂಗಳೂರು ಪ್ರೆಸ್ ಕ್ಯಾಲೆಂಡರ್‌ಗಳೇ'. ನಂಬಿಕೆ ಮತ್ತು ವಿಶ್ವಾಸಾರ್ಹತೆಗೆ ಮತ್ತೊಂದು ಹೆಸರು ಎನ್ನುವಂತಿರುವ ಬೆಂಗಳೂರು ಪ್ರೆಸ್ ಕ್ಯಾಲೆಂಡರ್‌ಗಳನ್ನು ಮೂರು ತಲೆಮಾರುಗಳು ಅನುಸರಿಸಿಕೊಂಡು ಬಂದಿವೆ. ಅದಕ್ಕಾಗಿ ನೂರರ ಸಂಭ್ರಮ. ನೂರು ವರ್ಷಗಳನ್ನು ಪೂರೈಸಿರುವುದು ಈ ಸಂಭ್ರಮವನ್ನು ಇನ್ನಷ್ಟು ಹೆಚ್ಚಿಸಿದೆ. ಜಾತಿ, ಧರ್ಮ, ಪ್ರದೇಶ ಎಲ್ಲದರ ಗಡಿ ಮೀರಿ ಸರ್ವರ ಪ್ರೀತಿಗೆ ಪಾತ್ರವಾಗಿರುವುದು ಈ ಕ್ಯಾಲೆಂಡರ್‌ಗಳ ವಿಶೇಷತೆ. ನೂರು ವರ್ಷಗಳ ಇತಿಹಾಸ ಮಾತ್ರವಲ್ಲದೇ ತನ್ನದೇ ಆದ ಪರಂಪರೆ ಕೂಡ ಈ ಕ್ಯಾಲೆಂಡರ್‌ಗಳಿಗಿದೆ.

### ಕ್ಯಾಲೆಂಡರ್ ಬೆನ್ನೇರಿ ಬಂದ ಕನಸುಗಳು

ಬೆಂಗಳೂರು ಪ್ರೆಸ್ ಕ್ಯಾಲೆಂಡರ್‌ಗಳ ಇತಿಹಾಸ ರೋಚಕವಾಗಿದೆ. ಇದೆಲ್ಲಾ ಪ್ರಾರಂಭವಾಗಿದ್ದು 1914ರ ಜುಲೈ ತಿಂಗಳಿನಲ್ಲಿ; ನಾಲ್ವಡಿ ಕೃಷ್ಣರಾಜ ಒಡೆಯರ್‌ರವರು, ಅಂದಿನ ದಿವಾನರಾಗಿದ್ದ ಸರ್.ಎಂ. ವಿಶ್ವೇಶ್ವರಯ್ಯನವರೊಡನೆ ಲಂಡನ್ ಪ್ರವಾಸ ಕೈಗೊಂಡಿದ್ದರಿಂದ ಅಲ್ಲಿನ ಲಂಡನ್ ರಾಯಲ್ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಂಡು ತಮ್ಮ ರಾಜ್ಯಕ್ಕೆ ಮುದ್ರಣ ಯಂತ್ರವನ್ನು ತರಿಸುವಲ್ಲಿ ಯಶಸ್ವಿಯಾದರು. ಆದರೆ ಅದನ್ನು ನಿರ್ವಹಿಸಲು ಬೇಕಾದ ಚೈತನ್ಯವು ಸಂಸ್ಥಾನಕ್ಕೆ ಇರಲಿಲ್ಲ. ಹೀಗಾಗಿ ಸರ್.ಎಂ.ವಿಯವರು ಬೆಂಗಳೂರಿನ ಗಣ್ಯ ನಾಗರೀಕರೊಡನೆ ಚರ್ಚಿಸಿ ಅವರಿಗೆ ಹೊಣೆ ನೀಡಲು ನಿರ್ಧರಿಸಿ ಮೊದಲು ಹದಿನೆಂಟು ಜನ ಗಣ್ಯರ ಆಡಳಿತ ಮಂಡಳಿಯನ್ನು ರಚಿಸಿದರು, ಸರ್.ಕೆ.ಪಿ ಪುಟ್ಟಣ್ಣಚೆಟ್ಟರು ಬೆಂಗಳೂರಿನ ಟೌನ್ ಹಾಲ್‌ನ ಖ್ಯಾತಿಯ ಸಂಸ್ಥಾಪಕ ಚೇರ್‌ಮೆನ್ ಆಗಿಯೂ, ರಾವ್ ಬಹದ್ದೂರ್ ಸಿ. ಹಯವದನ ರಾವ್ ಅವರು ಕಾರ್ಯದರ್ಶಿಯಾಗಿಯೂ ಜವಾಬ್ದಾರಿಯನ್ನು ವಹಿಸಿಕೊಂಡರು. ಹೀಗೆ 1916ರ ಆಗಸ್ಟ್ 5ರಂದು **"ದಿ ಬೆಂಗಳೂರು ಪ್ರಿಂಟಿಂಗ್ ಅಂಡ್ ಪಬ್ಲಿಷಿಂಗ್ ಕಂಪನಿ"** ಕಾರ್ಯಾರಂಭ ಮಾಡಿತು. ಬಹುಬೇಗ ಅದು ಜನರ ಬಾಯಿಯಲ್ಲಿ "ಬೆಂಗಳೂರು ಪ್ರೆಸ್" ಆಯಿತು.

ಪ್ರಾರಂಭದಲ್ಲಿ ಈ ಸಂಸ್ಥೆಗೆ ಸ್ವಂತ ಕಟ್ಟಡ ಇರಲಿಲ್ಲ. ಆಡಳಿತ ಮಂಡಳಿಯ ಹೆಚ್ಚಿನ ಸದಸ್ಯರು ಆಗ ತಾನೇ ಆರಂಭವಾಗಿದ್ದ "ಸ್ಟೇಟ್ ಬ್ಯಾಂಕ್ ಆಫ್ ಮೈಸೂರ್" ನ ಸದಸ್ಯರೂ ಕೂಡ ಆಗಿದ್ದರಿಂದ ಅವೆನ್ಯೂ ರಸ್ತೆಗೆ ಅಭಿಮುಖವಾಗಿದ್ದ ಅದರ ಆಡಳಿತ ಮಂಡಳಿಯ ಹೆಂಚಿನ ಛಾವಣಿಯ ಸಣ್ಣ ಕಟ್ಟಡದಲ್ಲಿ "ಬೆಂಗಳೂರು ಮುದ್ರಣಾಲಯ" ಕಾರ್ಯಾರಂಭ ಮಾಡಿತು. ಬಹುಬೇಗನೆ ಆಡಳಿತದ ಅನುಕೂಲಕ್ಕಾಗಿ ಶಂಕರಪುರದಲ್ಲಿ ಸಣ್ಣ ಕಟ್ಟಡಕ್ಕೆ ವರ್ಗಾವಣೆಗೊಂಡಿತು. ನಂತರ ಮೈಸೂರು ರಸ್ತೆಯಲ್ಲಿನ ಈಗಿನ ಕಟ್ಟಡಕ್ಕೆ ಸ್ಥಳಾಂತರ ಗೊಂಡಿತು. ಸ್ವಂತ ಕಟ್ಟಡವಾದ ಇದು ಅಂದು ಪ್ರಚಲಿತವಾಗಿದ್ದ ಮೈಸೂರು ವಾಸ್ತುಶಿಲ್ಪ ಶೈಲಿಗೆ ಅನುಗುಣವಾಗಿ ರೂಪುಗೊಂಡಿತ್ತು. ಆರಂಭದಲ್ಲಿ ಬೆಂಗಳೂರು ನಗರದ ಪ್ರಕಟಣೆಯ ಒತ್ತಡವೂ ಹೆಚ್ಚಿದ್ದರಿಂದ 1936ರ ಮಾರ್ಚ್ 17ರಂದು ಅರಮನೆಗೆ ಸಮೀಪವೇ ಮೈಸೂರಿನಲ್ಲಿ ತನ್ನ ಶಾಖೆಯನ್ನು ಆರಂಭಿಸಿತು.

### ರಾಜ್ಯದ ಕಾಲಮಾಪಕ: ಬೆಂಗಳೂರು ಕ್ಯಾಲೆಂಡರ್‌ಗಳು

ಕ್ಯಾಲೆಂಡರ್‌ನ ಪರಿಕಲ್ಪನೆ ಮೂಡಿ ಬರುವುದಕ್ಕೆ ಮೊದಲು ಪಂಚಾಂಗಗಳು ಭಾರತದಲ್ಲಿದ್ದವು. ಇದರ ಗಣನೆ ವೈಜ್ಞಾನಿಕವಾಗಿದ್ದರೂ ವ್ಯಾಖ್ಯಾನದಲ್ಲಾದ ಬದಲಾವಣೆಯಿಂದ ಪಂಗಡ, ಪ್ರದೇಶಗಳಿಗನುಗುಣವಾಗಿ ಪಂಚಾಂಗಗಳಿದ್ದವು. ಯಾವುದನ್ನೂ ಆಡಳಿತ ವ್ಯವಸ್ಥೆ ಅಧಿಕೃತ ಎಂದು ಕರೆದಿರಲಿಲ್ಲ. ಸಿಂಧ್ ಪ್ರಾಂತ್ಯದಲ್ಲಿ ಎಲ್ಲಾ ಧಾರ್ಮಿಕ ಆಚರಣೆಯ ಜೊತೆಗೆ ಸರ್ಕಾರದ ರಜಾದಿನವನ್ನೂ ಗುರುತಿಸುವ ಕ್ಯಾಲೆಂಡರ್ ಪದ್ಧತಿ

ಮು.ತಿ.ನೋ.



1908ರಲ್ಲಿ ರೂಪುಗೊಂಡಿತ್ತು. ಅಲ್ಲಿ ಮುಖ್ಯ ಇಂಜಿನಿಯರ್ ಆಗಿದ್ದ ಸರ್.ಎಂ.ವಿಶ್ವೇಶ್ವರಯ್ಯನವರು ಮೈಸೂರು ಸಂಸ್ಥಾನದಲ್ಲಿ ಅದನ್ನು ಜಾರಿಗೆ ತರುವ ಕನಸನ್ನು ಹೊಂದಿದ್ದರು. 1921ರಲ್ಲಿ ಕ್ಯಾಲೆಂಡರ್ ಪ್ರಕಟಣೆ ಆರಂಭವಾಯಿತು. ತನ್ನ ಸ್ವರೂಪದಿಂದ ಅದು ಬಹುಬೇಗ ಅಧಿಕೃತ ಎನ್ನುವ ಮನ್ನಣೆ ಪಡೆದುಕೊಂಡಿತು. "ಬೆಂಗಳೂರು ಮುದ್ರಣಾಲಯ" ಎಂದರೇ ಕ್ಯಾಲೆಂಡರ್ ಎಂದು ಕರೆಯುವ ಮಟ್ಟಿಗೆ ಅದರ ಜನಪ್ರಿಯತೆ ರೂಪುಗೊಂಡು ಕ್ಯಾಲೆಂಡರ್ ಪ್ರಕಟಣೆಯು ಈ ಸಂಸ್ಥೆಯ ಹೆಗ್ಗುರುತು ಎನ್ನಿಸಿಕೊಂಡು "ರಾಜ್ಯದ ಸಮಯಪಾಲಕ" ಎನ್ನುವ ಹೆಸರನ್ನು ಅದಕ್ಕೆ ತಂದಿತು. ಬೆಂಗಳೂರು ಮುದ್ರಣಾಲಯದ ಕ್ಯಾಲೆಂಡರ್ ಮೊದಲು ಆರಂಭವಾಗಿದ್ದು ಇಂಗ್ಲೀಷ್‌ನಲ್ಲಿ. ಅದಕ್ಕೆ ಸಂಸ್ಥಾನದ ಆಡಳಿತ ವ್ಯವಹಾರಗಳು ಇಂಗ್ಲೀಷ್‌ನಲ್ಲಿಯೇ ನಡೆಯುತ್ತಿದ್ದುದು ಮುಖ್ಯವಾದ ಕಾರಣವಾಗಿತ್ತು. ಇದರ ಜೊತೆಗೆ ಕನ್ನಡದಲ್ಲಿ ಶಿಕ್ಷಣವನ್ನು ಪಡೆದು ಓದಬಲ್ಲವರ ಸಂಖ್ಯೆ ಕೂಡ ಕಡಿಮೆ ಇತ್ತು. ಬೆಂಗಳೂರು ಮುದ್ರಣಾಲಯ ಕ್ಯಾಲೆಂಡರ್‌ಗಳು ಜನಪ್ರಿಯತೆಯನ್ನು ಪಡೆಯುತ್ತಾ ಹೋದಂತೆ ಅದನ್ನು ಕನ್ನಡದಲ್ಲಿಯೂ ಪ್ರಕಟಿಸಬೇಕು ಎನ್ನುವ ಒತ್ತಡ ಮೂಡಿ ಬರತೊಡಗಿತು. ಇದಕ್ಕೆ ಒತ್ತಡ ತಂದವರಲ್ಲಿ ಕನ್ನಡದ ಹಿರಿಯ ಬರಹಗಾರ ಮಾಸ್ತಿ ವೆಂಕಟೇಶ್ ಅಯ್ಯಂಗಾರರು ಮುಖ್ಯರಾದವರು. 1936ರಿಂದ ಕನ್ನಡ ಕ್ಯಾಲೆಂಡರ್‌ಗಳು ಪ್ರಕಟಣೆ ಆರಂಭಿಸಿ ಅಪಾರ ಜನಪ್ರಿಯತೆಯನ್ನು ಪಡೆದುಕೊಂಡವು. ವಿಷಯ ಸಂಗ್ರಹಣೆ ಮತ್ತು ವಿನ್ಯಾಸದಲ್ಲಿನ ಸ್ಪಷ್ಟತೆಯಿಂದ ಇಂದಿಗೂ ಅಧಿಕೃತ ಎನ್ನುವ ಹೆಗ್ಗಳಿಕೆಯನ್ನು ಬೆಂಗಳೂರು ಮುದ್ರಣಾಲಯದ ಕ್ಯಾಲೆಂಡರ್‌ಗಳು ಪಡೆದುಕೊಂಡಿವೆ.

ಪ್ರಕಟಣೆಯ ಮೊದಲ ಎರಡೂವರೆ ದಶಕಗಳ ಕಾಲ ಸಂಸ್ಥೆಯು ತನ್ನ ಅಸ್ತಿತ್ವಕ್ಕೆ ಕಾರಣವಾದ ಮೈಸೂರು ರಾಜಮನೆತನಕ್ಕೆ ಗೌರವ ಮತ್ತು ಕೃತಜ್ಞತೆಯನ್ನು ಸಲ್ಲಿಸಲು ಕ್ಯಾಲೆಂಡರ್‌ನ ನಾಲ್ಕೂ ಮೂಲೆಗಳಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್, ಚಾಮರಾಜ ಒಡೆಯರ್, ಕಂಠೀರವ ನರಸಿಂಹರಾಜ ಒಡೆಯರ್ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಇವರ ಚಿತ್ರಗಳನ್ನು ಪ್ರಕಟಿಸುತ್ತಿತ್ತು. ಸ್ವಾತಂತ್ರ್ಯಾನಂತರ ಮಹಾತ್ಮಾ ಗಾಂಧಿ, ಪಂಡಿತ್ ಜವಾಹರ್‌ಲಾಲ್ ನೆಹರೂ, ವಲ್ಲಭಭಾಯಿ ಪಟೇಲ್ ಅವರಂತಹ ರಾಷ್ಟ್ರನಾಯಕರ ಚಿತ್ರಗಳು ಬಂದವು. ಈ ಕಾಲಘಟ್ಟವನ್ನು ಸಂಸ್ಥೆಯ 'ಸಂಕ್ರಮಣ ಕಾಲ' ಎಂದು ಕರೆಯಬಹುದು. 1930 ರಿಂದ 1960ರವರೆಗೆ ಬೆಂಗಳೂರು ಮುದ್ರಣಾಲಯದ ಕ್ಯಾಲೆಂಡರ್ ವಿನ್ಯಾಸದಲ್ಲಿ ಕೆಲವು ಸಣ್ಣಪುಟ್ಟ ಬದಲಾವಣೆಗಳಾದರೂ ಒಟ್ಟು ಸ್ವರೂಪದಲ್ಲಿ ಎದ್ದುಕಾಣುವಂತಹ ಬದಲಾವಣೆಗಳಾಗಿರಲಿಲ್ಲ. 1960ರಲ್ಲಿ ಮುದ್ರಣ ಕ್ಷೇತ್ರದಲ್ಲಿ ಕ್ರಾಂತಿಕಾರಕ ಬದಲಾವಣೆಗಳು ಸಂಭವಿಸಿದವು. ಇದನ್ನು ಅವಲಂಬಿಸಿ ಕ್ಯಾಲೆಂಡರ್ ವಿನ್ಯಾಸದಲ್ಲಿಯೂ ಬದಲಾವಣೆಗಳಾದವು. ಅಕ್ಷರ ವಿನ್ಯಾಸ ಚಿಕ್ಕದಾಗಿ ಪಂಚಾಂಗದ ಮಾಹಿತಿಗಳ ಪ್ರಮಾಣ ಹೆಚ್ಚಿತು. ರಾಹುಕಾಲ, ಗುಳಿಕಕಾಲ, ಯಮಗಂಡ ಕಾಲಗಳಿಗೆ ಸಂಬಂಧಿಸಿದ ಮಾಹಿತಿಯನ್ನು ನೀಡುವುದು ಇದರಿಂದ ಸಾಧ್ಯವಾಯಿತು.

1988ರಲ್ಲಿ ಟೇಬಲ್ ಮೇಲೆ ಇಟ್ಟುಕೊಳ್ಳಲು ಸಾಧ್ಯವಾಗುವಂತಹ "ಟೇಬಲ್ ಕ್ಯಾಲೆಂಡರ್"ಗಳು ರೂಪುಗೊಂಡು ಜನಪ್ರಿಯವಾದವು. ಆಧುನಿಕತೆಯ ಭರಾಟೆ ಹೆಚ್ಚುತ್ತಾ ಹೋದಂತೆ ಅಪಾರ್ಟ್‌ಮೆಂಟ್‌ಗಳ ಕಾಲ ಬಂದಿತು. ಗೋಡೆಯ ಮೇಲೆ ಮೊಳೆ ಹೊಡೆಯುವುದು ಕಷ್ಟವಾಯಿತು. ಆಫೀಸ್‌ಗಳೂ ಕೂಡ ಸ್ಮಾಲ್ ಅಂಡ್ ಬ್ಯೂಟಿಫುಲ್ ಎಂಬ ತತ್ವದಂತೆ ರಚನೆಗೊಂಡವು. ಆಗ ಟೇಬಲ್ ಕ್ಯಾಲೆಂಡರ್‌ಗಳು ಜನಪ್ರಿಯವಾದವು. ಅಲ್ಪದಲ್ಲಿ ಕಲ್ಪವನ್ನು ಹಿಡಿಯುವಂತೆ ಗಾತ್ರದಲ್ಲಿ ಕಿರಿದಾದರೂ ತನ್ನ ಮೂಲ ಪ್ರಕಟಣೆಯ ಸರ್ವಸ್ವವನ್ನೂ ಹೊಂದಿರುವುದು ಬೆಂಗಳೂರು ಪ್ರೆಸ್ ಟೇಬಲ್ ಕ್ಯಾಲೆಂಡರ್‌ನ ವಿಶೇಷತೆ. ಕಿರಿದಾದ ಕ್ಯಾಲೆಂಡರ್‌ಗಳಂತೆ ಗಾತ್ರದಲ್ಲಿ ಹಿರಿದಾದ 'ಜಂಬೋ' ಕ್ಯಾಲೆಂಡರ್‌ಗಳನ್ನೂ ಬೆಂಗಳೂರು ಮುದ್ರಣಾಲಯ ರೂಪಿಸಿದೆ.

**ಅಧಿಕೃತತೆ ಲಭಿಸಿದ್ದು ಹೇಗೆ ?**

ನಮ್ಮ ದೇಶದಲ್ಲಿ ಅದರಲ್ಲಿಯೂ ಕರ್ನಾಟಕದ ಹಿಂದೂ ಪಂಚಾಂಗ ಪದ್ಧತಿಯಲ್ಲಿ ಸಿದ್ಧಾಂತ, ವಾಕ್ಯ, ದೃಗ್ಗಣಿತ, ಸೌರಮಾನ ಹೀಗೆ ಹಲವು ಪದ್ಧತಿಗಳಿವೆ. ಅದರ ಜೊತೆಗೆ ಜೈನರು, ಬೌದ್ಧರೂ ಕೂಡ ತಮ್ಮದೇ ಆದ ಪಂಚಾಂಗ ಕ್ರಮ ಹೊಂದಿದ್ದಾರೆ. ಕ್ರಿಶ್ಚಿಯನ್ ಪದ್ಧತಿಯ ಎಣಿಕೆ ಇದ್ದಂತೆ ಇಸ್ಲಾಂನ ಹಿಜಿರ ಪದ್ಧತಿ ಇದೆ. ಇವೆಲ್ಲದರ ಸಾರವನ್ನು ಸರಿಯಾದ ನೆಲೆಯಲ್ಲಿ ಗ್ರಹಿಸಿ ಎಲ್ಲಾ ಧರ್ಮದ ಆಚರಣೆಗಳನ್ನೂ ಕರಾರುವಕ್ಕಾಗಿ ನೀಡುತ್ತಿರುವುದು ಬೆಂಗಳೂರು ಮುದ್ರಣಾಲಯದ ಕ್ಯಾಲೆಂಡರ್‌ಗಳ ವಿಶೇಷತೆ. ಇದರ ಜೊತೆಗೆ ಕೊಡಗು, ಹಳೆ ಮೈಸೂರು, ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ ಹೀಗೆ ವಿವಿಧ ಪ್ರಾದೇಶಿಕ ಆಚರಣೆಗಳ ಅಧಿಕೃತ ವಿವರಗಳೂ ಕೂಡ ಇಲ್ಲಿ ದೊರಕುತ್ತವೆ. ಈ ಕಾರಣದಿಂದಲೇ ನಾಡಿನ ಜನ ತಲೆಮಾರುಗಳಿಂದ ಬೆಂಗಳೂರು ಮುದ್ರಣಾಲಯದ ಕ್ಯಾಲೆಂಡರ್‌ಗಳನ್ನು ನಂಬುತ್ತಾ ಬಂದಿದ್ದಾರೆ. ಇದಕ್ಕೆ ಲಭಿಸಿರುವ ಅಧಿಕೃತತೆ ಸಾರ್ವಜನಿಕರೇ ನೀಡಿರುವಂತಹದು.

ಪಂಚಾಂಗ ಗಣಿತ ಪದ್ಧತಿ ನಮ್ಮ ದೇಶದಲ್ಲಿ ಐದು ಸಾವಿರ ವರ್ಷಗಳಿಂದಲೂ ಪರಂಪರೆಯ ರೂಪದಲ್ಲಿ ರೂಪುಗೊಂಡಿದೆ. ಕಾಲದ ನಿರ್ಣಯಕ್ಕೆ ಇದು ಆರಂಭವಾದರೂ ಬಹುಬೇಗ ಸಾಂಸ್ಕೃತಿಕ ಅಂಶಗಳ ನಿರ್ಧಾರಕ್ಕೆ ನೆಲೆಯಾಯಿತು. ಆ ಮೂಲಕ



ಸಾಂಸ್ಕೃತಿಕ ಪರಂಪರೆ ರೂಪುಗೊಳ್ಳಲು ಕಾರಣವೂ ಆಯಿತು. ಅವಿಚ್ಛಿನ್ನವಾಗಿ ಹರಿದು ಬಂದಿರುವ ಈ ಜ್ಞಾನವಾಹಿನಿಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುವುದು ಬೆಂಗಳೂರು ಮುದ್ರಣಾಲಯ ನಾಡಿಗೆ ನೀಡಿರುವ ಕೊಡುಗೆ. ಮರೆವಿಗೆ ಜಾರುತ್ತಿರುವ ಈ ಜ್ಞಾನ ಶಾಖೆಯನ್ನು ಉಳಿಸಿಕೊಂಡು ಅದನ್ನು ಕರುನಾಡಿನ ಅಗತ್ಯಕ್ಕೆ ತಕ್ಕಂತೆ ಮರು ರೂಪಿಸುವಲ್ಲಿ ಬೆಂಗಳೂರು ಮುದ್ರಣಾಲಯ ಮಹತ್ತರವಾದ ಜವಾಬ್ದಾರಿಯನ್ನು ನಿರ್ವಹಿಸಿದೆ. ವಿಶ್ವದಾದ್ಯಂತ ಹರಡಿರುವ ಕನ್ನಡಿಗರು ಇದನ್ನೇ ತಮ್ಮ ಆಚರಣೆಗಳಿಗೆ ಆಧಾರವಾಗಿ ಬಳಸುವುದರಿಂದ ಸಾಂಸ್ಕೃತಿಕವಾಗಿ ಬೆಸೆಯುವ ಕಾರ್ಯವನ್ನೂ ಮಾಡುತ್ತಿದೆ. ಈ ಅರ್ಥದಲ್ಲಿ ನೂರು ವರ್ಷಗಳ ಯಶಸ್ವಿ ಮುಕ್ತಾಯ ಕೂಡ ಒಂದು ಪರಂಪರೆಯ ಚರಿತ್ರೆ ಕೂಡ ಹೌದು.

**ಮಲ್ಲಿಗೆ ಪಂಚಾಂಗ ದರ್ಶಿನಿ : ವಿನೂತನ ಪ್ರಕಟಣೆ**

ಕ್ಯಾಲೆಂಡರ್ ಪ್ರಕಟಣೆಯನ್ನು ಪರಂಪರೆಗೆ ಒಗ್ಗಿಸಿ ಮುದ್ರಣಾಲಯ ರೂಪಿಸಿದ ಪ್ರಕಟಣೆ "ಮಲ್ಲಿಗೆ ಪಂಚಾಂಗ ದರ್ಶಿನಿ." ಪಂಚಾಂಗ ಎನ್ನುವುದು ಭಾರತೀಯರಿಗೆ ಪವಿತ್ರವಾದ ಆಕರ. ಆಧುನಿಕತೆ ಕಾಲಿಟ್ಟ ನಂತರ ಸಮಾಜದಲ್ಲಿ ಮೂಡಿದ ಪರಿವರ್ತನೆಯ ಹಿನ್ನಲೆಯಲ್ಲಿ ಪಂಚಾಂಗದ ಸ್ವರೂಪ ಕೂಡ ಬದಲಾಗಬೇಕಿತ್ತು. ಈ ಸಾಹಸವನ್ನು ಬೆಂಗಳೂರು ಮುದ್ರಣಾಲಯ ಮಾಡಿತು. ಬೆಂಗಳೂರು ಮುದ್ರಣಾಲಯ ಪಂಚಾಂಗದ ಉಪಯೋಗ ಎಲ್ಲರಿಗೂ ದೊರಕುವಂತೆ ಮಾಡುವ ಉದ್ದೇಶದಿಂದ ಕ್ಯಾಲೆಂಡರ್ ಮಾಹಿತಿಯೊಂದಿಗೆ ಪಂಚಾಂಗದ ಅಗತ್ಯ ಅಂಶಗಳನ್ನೂ ಜೋಡಿಸಿ 1990ರಲ್ಲಿ ಮೊದಲ ಸಲ ಈ ಪ್ರಕಟಣೆಯನ್ನು ರೂಪಿಸಿದರು. 1994ರಿಂದ ಪಂಚಾಂಗದರ್ಶಿನಿಯ ಹಿಂಬದಿಯ ಜಾಗವನ್ನು ಸಮರ್ಥವಾಗಿ ಬಳಸಿಕೊಂಡು ಅಲ್ಲಿ ಉಪಯುಕ್ತ ಜ್ಯೋತಿಷಿ ವಿಷಯಗಳು, ಮಾಸಭವಿಷ್ಯ, ಕನ್ನಡ ನಾಡಿನ ಜಾತ್ರೆ ರಥೋತ್ಸವದ ವಿವರಗಳು, ಹಬ್ಬ ವ್ರತಗಳ ಕಿರುಪರಿಚಯಗಳನ್ನು ಪ್ರಕಟಿಸಲು ಆರಂಭಿಸಿತು. ಕ್ರಮೇಣ ಹಿಂಭಾಗದಲ್ಲಿ ವಿಶೇಷ ಲೇಖನ ಮಾಲೆಗಳು ಪ್ರಕಟವಾಗ ತೊಡಗಿದವು. ಕ್ಯಾಲೆಂಡರ್ ಗಳು ನಿರಂತರವಾಗಿ ಹರಿಯುವ ನದಿಗಳಾದರೆ ಇವೆಲ್ಲವೂ ತೊರೆಗಳಾಗಿ ಜನರ ಮನ್ನಣೆಯನ್ನು ಪಡೆದಿವೆ.

**ಆ ಕ್ಯಾಲೆಂಡರ್‌ನಿಂದ ಈ ಕ್ಯಾಲೆಂಡರ್‌ವರೆಗೆ**


ಬೆಂಗಳೂರು ಮುದ್ರಣಾಲಯವು "ಈ ಕ್ಯಾಲೆಂಡರ್" ಅನ್ನು ರೂಪಿಸುವ ಮೂಲಕ ಡಿಜಿಟಲ್ ಯುಗಕ್ಕೂ ತನ್ನನ್ನು ತೆರೆದುಕೊಂಡಿತು. ಇದು ವಿಶ್ವದಾದ್ಯಂತ ಉಚಿತವಾಗಿ ಡೌನ್ ಲೋಡ್ ಮಾಡಿಕೊಳ್ಳಬಲ್ಲಂತಹ ಉಚಿತ ಕ್ಯಾಲೆಂಡರ್. ಗೋಡೆಯ ಮೇಲಿನ ಕ್ಯಾಲೆಂಡರ್‌ನ ಎಲ್ಲಾ ಲಕ್ಷಣಗಳನ್ನೂ ಪಡೆದುಕೊಂಡಿರುವ ಇದು ಡೌನ್‌ಲೋಡ್ ಮಾಡಿದ ಕೂಡಲೇ ಕಂಪ್ಯೂಟರ್ ಪರದೆಯ ಅಂಚಿಗೆ ಬಂದು ಕುಳಿತುಕೊಳ್ಳುತ್ತದೆ. ಇದರಿಂದ ಸೂಕ್ತ ಮಾಹಿತಿಯನ್ನು ಪಡೆದುಕೊಂಡು ನಂತರ ಕಂಪ್ಯೂಟರ್ ಬಳಕೆಗೆ ಅನುಕೂಲವಾಗುವಂತೆ ಮಾಯವಾಗಿ ಬಿಡುತ್ತದೆ. ಈ ಸ್ಥಿತಿಸ್ಥಾಪಕತ್ವವೇ ಇದನ್ನು ಬಳಸುವವರ ಮಿತ್ರನಂತೆ ಮಾರ್ಪಡಿಸಿದೆ. ಇದರ ಜೊತೆಗೆ ವೈಯಕ್ತಿಕವಾದ ಪ್ರಮುಖ ದಿನಾಂಕಗಳನ್ನೂ ಸೇರಿಸುವ ಮೂಲಕ "ಪರ್ಸನಲ್ ಕ್ಯಾಲೆಂಡರ್" ಆಗಿ ಇದನ್ನು ಬದಲಾಯಿಸಿಕೊಳ್ಳುವ ಆಯ್ಕೆಗಳೂ ಕೂಡ ಇದಕ್ಕಿವೆ. ಇದರ ಮುಂದಿನ ಹಂತವಾಗಿ ಮೊಬೈಲ್ ಮೂಲಕವು ಕ್ಯಾಲೆಂಡರ್ ಈಗ ಗ್ರಾಹಕರಿಗೆ ಲಭ್ಯವಾಗುತ್ತಿದೆ.

ನೂರು ವರ್ಷಗಳ ಸಾರ್ಥಕ ಸೇವೆಯ ನಂತರ "ಬೆಂಗಳೂರು ಮುದ್ರಣಾಲಯ" ಕೇವಲ ಪರಂಪರೆಯ ಕೊಂಡಿಯಾಗಿ ಉಳಿಯದೆ ಆಧುನಿಕತೆಯನ್ನು ತನ್ನಲ್ಲಿ ಅಳವಡಿಸಿಕೊಂಡಿದೆ. 'ಹಳೆ ಬೇರು ಹೊಸ ಚಿಗುರು' ಎನ್ನುವ ಡಿ.ವಿ.ಜಿಯವರ ಕವಿವಾಣಿಗೆ ಇದು ಸಾರ್ಥಕ ನಿದರ್ಶನವಾಗಿದೆ.

**ನೂರರ ಗಡಿ ದಾಟಿದ ಮೇಲೂ ಉಜ್ವಲವಾಗಿವೆ ನಾಳೆಗಳು**

ಶತಮಾನದ ಹೊಸ್ತಿಲಿನಲ್ಲಿರುವ ಬೆಂಗಳೂರು ಮುದ್ರಣಾಲಯ ಕ್ಯಾಲೆಂಡರ್ ಪರಂಪರೆಯ ಹಿರಿಮೆಯನ್ನು ಆಧುನಿಕತೆಗೆ ಒಗ್ಗಿಸುವ ಪ್ರಯತ್ನ ಮಾಡುತ್ತಾ ಹಳತು ಹೊಸತರ ನಡುವಿನ ಸೇತುವೆಯಾಗಿದೆ. ಕ್ಯಾಲೆಂಡರ್ ಎನ್ನುವುದು ಒಂದು ನಿರ್ಜೀವ ವಸ್ತುವಲ್ಲ. ಪ್ರತಿ ದಿನದೊಂದಿಗೂ ಬದುಕಿನ ಕನಸುಗಳ ಸೇರಿರುತ್ತವೆ. ಈ ನೂರು ವರ್ಷದ ಕ್ಯಾಲೆಂಡರ್‌ನಲ್ಲಿ ಕೋಟ್ಯಾಂತರ ಜನರ ಕನಸುಗಳಿವೆ.

ನಿರಂತರವಾಗಿ ದೀಪವನ್ನು ಬೆಳಗಿಸುವ ಕೆಲಸವನ್ನು ಬೆಂಗಳೂರು ಮುದ್ರಣಾಲಯದ ಕ್ಯಾಲೆಂಡರ್‌ಗಳು ಮಾಡಿವೆ. ಮಾಡುತ್ತಲೇ ಇರುತ್ತವೆ.







– ಡಾ. ಶ್ರೀಧರ ಹೆಚ್.
ಮುಖ್ಯಸ್ಥರು, ಇತಿಹಾಸ ವಿಭಾಗ



# ವಿಜ್ಞಾನ ಲೋಕದ ವರದಾನ – ಡಾ. ಸಿ.ವಿ. ರಾಮನ್

ಡಾ. ಸಿ.ವಿ. ರಾಮನ್ ವಿಜ್ಞಾನ ಕ್ಷೇತ್ರಕ್ಕೆ ನೀಡಿರುವ ಕೊಡುಗೆಗಳು ಮತ್ತು ಅವರ ವಿಭಿನ್ನ ಸಂಶೋಧನೆಗಳು ಭಾರತ ಮತ್ತು ವಿಶ್ವಕ್ಕೆ ಚಿರಪರಿಚಿತ. ಇವರು 1888ರ ನವೆಂಬರ್ 7 ರಂದು ತಮಿಳುನಾಡಿನ ತಿರುಚನಾಪಳ್ಳಿಯಲ್ಲಿ ಜನಿಸಿದರು. ಅವರ ತಂದೆ ಗಣಿತ ಮತ್ತು ಭೌತಶಾಸ್ತ್ರದಲ್ಲಿ ಉಪನ್ಯಾಸಕರಾಗಿದ್ದರು ಆದ್ದರಿಂದ ರಾಮನ್‌ರವರು ತಮ್ಮ ಚಿಕ್ಕವಯಸ್ಸಿನಲ್ಲಿಯೇ ಶೈಕ್ಷಣಿಕ ವಾತಾವರಣಕ್ಕೆ ಒಗ್ಗಿಕೊಂಡರು.



ಇವರ ಪೂರ್ಣ ಹೆಸರು ಡಾ.ಚಂದ್ರಶೇಖರ ವೆಂಕಟರಮಣ ಇವರ ತಂದೆ ಆರ್. ಚಂದ್ರಶೇಖರ ಅಯ್ಯರ್, ತಾಯಿ ಪಾರ್ವತಿ ಅಮ್ಮಲ್. ಇವರ ಪತ್ನಿ ಲೋಕಸುಂದರಿ ಅಮ್ಮಲ್.

**ಇವರಿಗೆ ದೊರೆತ ಪ್ರಶಸ್ತಿಗಳು:** ವ್ಯಾಟೂಚಿ ಪದಕ, ನೈಟ್ ಬ್ಯಾಚುಲರ್, ಹೊಸಪದಕ, ಭೌತಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿ, ಭಾರತ ರತ್ನ, ಲೆನಿನ್ ಶಾಂತಿ ಪ್ರಶಸ್ತಿ, ರಾಯಲ್ ಸೊಸೈಟಿಯ ಫೆಲೋ. ಡಾ. ಸಿ.ವಿ. ರಾಮನ್ 1888ರ ನವೆಂಬರ್ 7 ರಂದು ತಮಿಳುನಾಡಿನ ತಿರುಚನಾಪಳ್ಳಿಯಲ್ಲಿ ಸಾಂಪ್ರದಾಯಿಕ ದಕ್ಷಿಣ ಭಾರತದ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ವಿಶಾಖಪಟ್ಟಣಂನ ಕಾಲೇಜಿನಲ್ಲಿ ಗಣಿತ ಮತ್ತು ಭೌತಶಾಸ್ತ್ರದ ಉಪನ್ಯಾಸಕರಾಗಿ ಅವರ ತಂದೆ ವೃತ್ತಿ ನಿರ್ವಹಿಸುತ್ತಿದ್ದರು. ಸಿ.ವಿ. ರಾಮನ್ ಬಾಲ್ಯದಿಂದಲೂ ಬುದ್ಧಿವಂತ ವಿದ್ಯಾರ್ಥಿಯಾಗಿದ್ದು, 12ನೇ ವಯಸ್ಸಿನಲ್ಲಿ ಅವರು ತಮ್ಮ ಮೆಟ್ರಿಕ್ಯುಲೇಷನ್ ಮುಗಿಸಿ ವಿದ್ಯಾರ್ಥಿವೇತನದೊಂದಿಗೆ ಉತ್ತೀರ್ಣರಾದರು. 1902ರಲ್ಲಿ ಇವರು ಪ್ರೆಸಿಡೆನ್ಸಿ ಕಾಲೇಜಿಗೆ ಸೇರಿದರು ಮತ್ತು 1904ರಲ್ಲಿ ಪದವಿ ಪಡೆದರು. ಆ ಸಮಯದಲ್ಲಿ ಅವರು ಮೊದಲ ಸ್ಥಾನವನ್ನು ಪಡೆದ ಏಕೈಕ ವಿದ್ಯಾರ್ಥಿ. ಅವರು ಅದೇ ಕಾಲೇಜಿನಿಂದ ಭೌತಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು ಮತ್ತು ಹಿಂದಿನ ಎಲ್ಲಾ ದಾಖಲೆಗಳನ್ನು ಮುರಿದರು. 1907ರಲ್ಲಿ ಲೋಕಸುಂದರಿ ಅಮ್ಮಲ್ ಅವರನ್ನು ವಿವಾಹವಾದರು ಮತ್ತು ಚಂದ್ರಶೇಖರ ಮತ್ತು ರಾಧಾಕೃಷ್ಣನ್ ಎಂಬ ಇಬ್ಬರು ಗಂಡು ಮಕ್ಕಳನ್ನು ಹೊಂದಿದ್ದರು.

**ಡಾ. ಚಂದ್ರಶೇಖರ ವೆಂಕಟರಾಮನ್‌ರ ವೃತ್ತಿಜೀವನ:**

ತಂದೆಯ ಆಸಕ್ತಿಯಿಂದಾಗಿ ಅವರು ಫೈನಾನ್ಸಿಯಲ್ ಸಿವಿಲ್ ಸರ್ವೀಸಸ್ (ಎಫ್‌ಸಿಎಸ್) ಪರೀಕ್ಷೆಗೆ ಹಾಜರಾಗಿ ಪ್ರಥಮ ಸ್ಥಾನ ಪಡೆದರು. 1907ರಲ್ಲಿ ಅವರು ಕಲ್ಕತ್ತಾಗೆ ಹೋಗಿ ಸಹಾಯಕ ಅಕೌಂಟೆಂಟ್ ಜನರಲ್ ಆಗಿ ಸೇರಿದರು. ಜೊತೆಗೆ ಬಿಡುವಿನ ವೇಳೆಯಲ್ಲಿ ಅವರು ಭಾರತೀಯ ವಿಜ್ಞಾನ ಕೃಷಿಯಲ್ಲಿ ಸಂಶೋಧನೆ ನಡೆಸಲು ಪ್ರಯೋಗಾಲಯಕ್ಕೆ ಹೋಗುತ್ತಿದ್ದರು. ಪ್ರಯೋಗಾಲಯದಲ್ಲಿ ಲಭ್ಯವಿರುವ ಸೌಲಭ್ಯಗಳು ಬಹಳ ಸೀಮಿತವಾಗಿದ್ದರೂ, ಅವರು ತಮ್ಮ ಸಂಶೋಧನೆಯನ್ನು ಮುಂದುವರೆಸಿದರು ಮತ್ತು 'ನೇಚರ್', 'ದಿ ಫಿಲಾಸಫಿಕಲ್ ಮ್ಯಾಗಜೀನ್', 'ಫಿಸಿಕ್ಸ್ ರಿವ್ಯೂ' ಸೇರಿದಂತೆ ಪ್ರಮುಖ ಅಂತರಾಷ್ಟ್ರೀಯ ನಿಯತಕಾಲಿಕೆಗಳಲ್ಲಿ ತಮ್ಮ ಸಂಶೋಧನೆಗಳನ್ನು ಪ್ರಕಟಿಸಿದರು.

ಭೌತಶಾಸ್ತ್ರದ ಮೊದಲ ಪಾಲಿಟ್ ಪ್ರಾಧ್ಯಾಪಕರಾಗಿ 1917ರಲ್ಲಿ ಕಲ್ಕತ್ತಾ ವಿಶ್ವವಿದ್ಯಾನಿಲಯಕ್ಕೆ ಸೇರಲು ಅವರಿಗೆ ಅವಕಾಶ ಸಿಕ್ಕಿತು. ಕಲ್ಕತ್ತಾದಲ್ಲಿ 15 ವರ್ಷಗಳ ಸೇವೆಯ ನಂತರ ಅವರು 1933–1940ರ ವರೆಗೆ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಪ್ರಾಧ್ಯಾಪಕರಾದರು. 1948 ರಿಂದ ಅವರು ಬೆಂಗಳೂರಿನ ರಾಮನ್ ಇನ್ಸ್ಟ್ಯೂಟ್ ಆಫ್ ರಿಸರ್ಚ್ ಸಂಸ್ಥೆಯ ನಿರ್ದೇಶಕರಾದರು.

**ಸಿ.ವಿ. ರಾಮನ್ ಅವರ ಕೃತಿಗಳು ಮತ್ತು ಅನ್ವೇಷಣೆ:** ಇವರು 1926ರಲ್ಲಿ ಇಂಡಿಯನ್ ಜನರಲ್ ಆಫ್ ಫಿಸಿಕ್ಸ್ ಅನ್ನು ಸ್ಥಾಪಿಸಿ ಅದರ ಸಂಪಾದಕರಾದರು. ಅವರು ಭಾರತೀಯ ವಿಜ್ಞಾನ ಅಕಾಡೆಮಿ ಸ್ಥಾಪನೆಗೆ ಪ್ರಾಯೋಜಕತ್ವ ನೀಡಿದರು. ಮತ್ತು ಪ್ರಾರಂಭದಿಂದಲೂ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು. ಪ್ರಸ್ತುತ ವಿಜ್ಞಾನವನ್ನು ಪ್ರಕಟಿಸುವ ಬೆಂಗಳೂರಿನ ಪ್ರಸ್ತುತ ವಿಜ್ಞಾನ ಸಂಘದ ಅಧ್ಯಕ್ಷರಾಗಿದ್ದರು. 1928ರಲ್ಲಿ ಅವರು ಹ್ಯಾಂಡ್‌ಬಚ್ ಡೆರ್ ಫಿಸಿಕ್‌ನ 8ನೇ ಸಂಪುಟಕ್ಕೆ ಸಂಗೀತ ವಾದ್ಯಗಳ ಸಿದ್ಧಾಂತದ ಬಗ್ಗೆ ಒಂದು ಲೇಖನವನ್ನು ಬರೆದರು. ಅವರು 1922ರಲ್ಲಿ "ಬೆಳಕಿನ ಅಣ್ವಿಕ ವಿವರ್ತನೆ" ಕುರಿತು ತಮ್ಮ ಕೃತಿಯನ್ನು ಪ್ರಕಟಿಸಿದರು. ಇದು 1928ರ ಫೆಬ್ರವರಿ 28ರಂದು ವಿಕಿರಣ ಪರಿಣಾಮದ ಅಂತಿಮ ಆವಿಷ್ಕಾರಕ್ಕೆ ಕಾರಣವಾಯಿತು ಮತ್ತು 1930ರಲ್ಲಿ ಭೌತಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿಯನ್ನು ಗಳಿಸಿ ನೊಬೆಲ್ ಪಡೆದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ರಾಮನ್ ಸಂಶೋಧನಾ ಸಂಸ್ಥೆಯ ಪ್ರಯೋಗಾಲಯದಲ್ಲಿ ಕಾರ್ಯನಿರ್ವಹಿಸುತ್ತಿರುವಾಗ ಶ್ರೀಯುತರು 1970ರ ನವೆಂಬರ್ 21 ರಂದು ಹೃದಯಾಘಾತದಿಂದ ತಮ್ಮ ಕೊನೆಯುಸಿರೆಳೆದರು.

**– ಪುನೀತ್ ಎಸ್**
ಅಂತಿಮ ವರ್ಷದ ಬಿ.ಎ.






## VOMC in MAHAM - 2020



## VOMC in Valedictory Program of Student Parliament & Talent Forum 2019 - 2020




Ec: Harsha.S






**ಶ್ರೀ ಕೆಂಪಹೊನ್ನಯ್ಯ, ಐ.ಎ.ಎಸ್. ಅವರಿಗೆ**
**ವಾರದ ಸಮಾವೇಶದಲ್ಲಿ ಅಭಿನಂದನಾ ಸನ್ಮಾನ**




**ಶ್ರೀ ಕೆಂಪಹೊನ್ನಯ್ಯ, ಐ.ಎ.ಎಸ್. ಅವರಿಂದ**
**'ಕದಂಬ' ಮಾಸಿಕ ಸಂಚಿಕೆ–28 ಬಿಡುಗಡೆ**



## ಸ್ವಾಮಿ ವಿವೇಕಾನಂದ ಜಯಂತಿ ಆಚರಣೆ ಹಾಗೂ ನಾಗರಿಕ ಸೇವಾ ಪರೀಕ್ಷೆಗಳ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ







# ನಾಗರಿಕ ಸೇವಾ ಪರೀಕ್ಷೆ ಎದುರಿಸಲು ಬರೆಯುವ, ಓದುವ ಕೌಶಲ್ಯ ಮುಖ್ಯ

## ಕರ್ನಾಟಕದ ಅಂಧ ಐಎಎಸ್ ಅಧಿಕಾರಿ ಕೆಂಪಹೊನ್ನಯ್ಯ ಸಲಹೆ

• **ಕನ್ನಡಪ್ರಭ ವಾರ್ತೆ** ಮೈಸೂರು

ನಾಗರಿಕ ಸೇವಾ ಪರೀಕ್ಷೆಗಳನ್ನು ಎದುರಿಸಲು ವಿಷಯದ ಆಳ ಜ್ಞಾನ, ಸಾಮಾನ್ಯ ತಿಳಿವಳಿಕೆ, ನೈತಿಕತೆ, ಬರೆಯುವ ಹಾಗೂ ಓದುವ ಕೌಶಲ್ಯ ಮುಖ್ಯವಾಗುತ್ತದೆ ಎಂದು ಪಶ್ಚಿಮ ಬಂಗಾಳದ ಆಡಳಿತ ತರಬೇತಿ ಸಂಸ್ಥೆಯ ಸಹಾಯಕ ಜಿಲ್ಲಾಧಿಕಾರಿಯಾಗಿರುವ ಕರ್ನಾಟಕದ ಅಂಧ ಐಎಎಸ್ ಅಧಿಕಾರಿ ಕೆಂಪಹೊನ್ನಯ್ಯ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಇತಿಹಾಸ ವಿಭಾಗ, ಎಂಟ್ರಿ ಟು ಸರ್ವೀಸ್ ಐಕ್ಯೂಎಸಿ ಮತ್ತು ಎನ್ಎಸ್ಎಸ್ ಘಟಕ ಸಂಯುಕ್ತವಾಗಿ ಶನಿವಾರ ಏರ್ಪಡಿಸಿದ್ದ ವಿವೇಕಾನಂದ ಜಯಂತಿಯಲ್ಲಿ ಅವರು ನಾಗರಿಕ ಸೇವಾ ಪರೀಕ್ಷೆಗಳ ಕುರಿತು ವಿಶೇಷ ಉಪನ್ಯಾಸ ನೀಡಿದರು.

**ಕಠಿಣ ಪರಿಶ್ರಮ:**

ಪ್ರತಿ ವರ್ಷ ಫೆಬ್ರವರಿಯಲ್ಲಿ ನಾಗರಿಕ ಸೇವಾ ಪರೀಕ್ಷೆಗಳ ಸುತ್ತೋಲೆ ಹೊರಡಿಸಲಾಗುತ್ತದೆ. ಈ ಪೂರ್ವಭಾವಿ ಪರೀಕ್ಷೆಗಳನ್ನು ತೇರ್ಗಡೆ ಹೊಂದಲು ವಿದ್ಯಾರ್ಥಿಗಳಲ್ಲಿ ಕಠಿಣ ಪರಿಶ್ರಮ, ಸಂವಹನ ಕೌಶಲ್ಯ, ರಾಜಕೀಯ, ಆರ್ಥಿಕ, ಸಾಮಾಜಿಕ, ಭೌಗೋಳಿಕ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಅಧ್ಯಯನ ಅವಶ್ಯಕ. ಪರೀಕ್ಷೆಯಲ್ಲಿ ಹೆಚ್ಚಾಗಿ ತಾರ್ಕಿಕ ವಿಶ್ಲೇಷಣೆ ಮಾಡುವ ಪ್ರಶ್ನೆಗಳು ಇರುತ್ತದೆ ಎಂದರು.

ತಾವು ತೆಗೆದುಕೊಂಡ ವಿಷಯದ ಬಗ್ಗೆ ಪುಸ್ತಕಗಳನ್ನು



ವಿವೇಕಾನಂದ ಜಯಂತಿಯನ್ನು ಅಂಧ ಐಎಎಸ್ ಅಧಿಕಾರಿ ಕೆಂಪಹೊನ್ನಯ್ಯ ಉದ್ಘಾಟಿಸಿದರು.

### ಜೀವಂತ ಗ್ರಂಥಾಲಯ

ಸಾಧಕರು ಒಂದು ಜೀವಂತ ಗ್ರಂಥಾಲಯವಿದ್ದಂತೆ, ಹೆಚ್ಚಿನ ಸ್ಪರ್ಧಾರ್ಥಿಗಳು ಅಧಿಸೂಚನೆ ಪ್ರಕಟವಾದ ನಂತರ ಅಭ್ಯಾಸದಲ್ಲಿ ತೊಡಗುತ್ತಾರೆ. ಇದರಿಂದ ಪರಿಪೂರ್ಣ ಅಧ್ಯಯನ ಸಾಧ್ಯವಿಲ್ಲ. ಕೆಲವು ವರ್ಷಗಳ ಆಳವಾದ ಅಧ್ಯಯನ ಅಗತ್ಯತೆ ಇದ್ದರೆ ಮಾತ್ರ ಗೆಲುವು ಸಾಧಿಸಬಹುದು ಎಂದು ಕೆಂಪಹೊನ್ನಯ್ಯ ಹೇಳಿದರು.

ಆಸಕ್ತಿಯಿಂದ ಮನಸಿಟ್ಟು ಓದುವುದು. ದಿನಪತ್ರಿಕೆಗಳಲ್ಲಿ ಬರುವ ಸಂಪಾದಕೀಯ, ಅಂಕಣ ಮತ್ತು ಇತರ ಪ್ರಚಲಿತ ವಿದ್ಯಮಾನಗಳನ್ನು ಕುರಿತ ಲೇಖನಗಳನ್ನು ದಿನನಿತ್ಯ ಓದುವುದು ಹಾಗೂ ವಿಶ್ಲೇಷಣೆ ಮಾಡುವುದು ಅಗತ್ಯ. ಇತರ ಸಾಧಕರೊಂದಿಗೆ ಬೆರೆತು ವಿಚಾರ ವಿನಿಮಯ ಮಾಡುವುದು, ಅವರ ಅನುಭವಗಳನ್ನು ಪಡೆದುಕೊಳ್ಳಬೇಕು ಎಂದು ಅವರು ಸಲಹೆ ನೀಡಿದರು. ನಂತರ ಕಾಲೇಜು ವಿವಿಧ ವಿಭಾಗಗಳ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಇದೇ ವೇಳೆ ಕೆಂಪಹೊನ್ನಯ್ಯ ಅವರನ್ನು ಕಾಲೇಜು ವತಿಯಿಂದ ಸನ್ಮಾನಿಸಲಾಯಿತು.

ಕಾಲೇಜಿನ ಪ್ರಾಂಶುಪಾಲ ಡಾ. ಎಸ್. ವೆಂಕಟರಾಮು, ಇತಿಹಾಸ ವಿಭಾಗದ ಮುಖ್ಯಸ್ಥ ಡಾ. ಎಚ್. ಶ್ರೀಧರ, ಎನ್ಎಸ್ಎಸ್ ಕಾರ್ಯಕ್ರಮಾಧಿಕಾರಿ ಡಾ. ಎ.ಜಿ. ಧರ್ಮೇಶ್ ಮೊದಲಾದವರು ಇದ್ದರು.



# Farewell Programme for Final Year Volunteers - 2017 to 2020




















# Awareness Programme on UPSC & KPSC Exams - 11.03.2020

**by Sri Manjunatha T M, Administrator & Faculty of Gurudev IAS & KAS Academy, Dharwad.**









ಶಿಕ್ಷಣದಿಂದ ಶ್ರೇಷ್ಠತೆ

**ಎಸ್‌ಬಿಆರ್‌ಆರ್ ಮಹಾಜನ ಪ್ರಥಮದರ್ಜೆ ಕಾಲೇಜು (ಸ್ವಾಯತ್ತ)**

ಜಯಲಕ್ಷ್ಮೀಪುರಂ, ಮೈಸೂರು–12

ಶ್ರೇಷ್ಠತೆಯ ಸಾಮರ್ಥ್ಯವುಳ್ಳ ಕಾಲೇಜು

**ಇತಿಹಾಸ ವಿಭಾಗ**

**Dept. of History**

**ಮೈಸೂರು ವಿಶ್ವವಿದ್ಯಾನಿಲಯದಿಂದ ಸಂಯೋಜನೆಗೊಂಡು, ನ್ಯಾಕ್‌ನಿಂದ 'ಎ' ಮಾನ್ಯತೆ ಪಡೆದಿದೆ.**




ಸಂಚಿಕೆ: 30 ಜನವರಿ 2021 | ಪ್ರಧಾನ ಸಂಪಾದಕರು: ಡಾ. ಬಿ.ಆರ್. ಜಯಕುಮಾರಿ, ಪ್ರಾಂಶುಪಾಲರು | www.mahajanafgc.com | ಸಂಪಾದಕರು: ಡಾ.ಶ್ರೀಧರ ಹೆಚ್, ಇತಿಹಾಸ ವಿಭಾಗ | ಪುಟಗಳು: 08

## ಸಂಪಾದಕೀಯ

### ಭಾರತೀಯ ಸ್ತ್ರೀವಾದದ ತಾಯಿ; ಸಾವಿತ್ರಿಬಾಯಿ ಫುಲೆ



ಶಿಕ್ಷಕಿಯೊಬ್ಬರು ಶಾಲೆಗೆ ನಡೆದು ಹೋಗುವಾಗ ಕರ್ಮಠರು ಒಡೆದ ಗಾಜಿನ ಚೂರುಗಳನ್ನು ರಸ್ತೆಯಲ್ಲಿ ಚೆಲ್ಲಿ, ಕೇಕೆ ಹಾಕುತ್ತಾ, ಸಗಣಿ, ಕೆಸರು ಎರಚುವ ಅಸಭ್ಯ ಕೃತ್ಯಗಳಲ್ಲಿ ತೊಡಗುತ್ತಿದ್ದರು. ಇಂತಹ ಅಸಭ್ಯ ನಡವಳಿಕೆಗಳಿಂದ ಕೊಂಚವೂ ವಿಚಲಿತರಾಗದ ಶಿಕ್ಷಕಿ, ತಾನು ಉಟ್ಟ ಸೀರೆ ಕೆಸರೆರಚಾಟದಿಂದ ಮಲೀನಗೊಂಡಲ್ಲಿ, ತನ್ನ ಬ್ಯಾಗಿನಲ್ಲಿ ಸದಾ ಇರಿಸಿಕೊಳ್ಳುತ್ತಿದ್ದ ಬೇರೊಂದು ಸೀರೆಯನ್ನು ಶಾಲೆಯಲ್ಲಿ ಬದಲಿಸಿಕೊಂಡು ಮಕ್ಕಳ ಪಾಠಕ್ಕೆ ಅಣಿಯಾಗುತ್ತಿದ್ದರು. ಅವರೇ ಸಾವಿತ್ರಿಬಾಯಿ ಫುಲೆ. ಇದು 1848ರ ಸಮಯದಲ್ಲಿ, ಅವರು ನಿತ್ಯ ಅನುಭವಿಸುತ್ತಿದ್ದ ಕಿರುಕುಳ. ಸಮಾಜದ ಕೆಲವೇ ಜನ ಮಾತ್ರ ಅಕ್ಷರ ಸಂಸ್ಕೃತಿಯ ಯಜಮಾನಿಕೆಯನ್ನು ಹೊಂದಿದ್ದ ಮತ್ತು ಸಮಾಜದ ಶೋಷಿತ ಹಾಗೂ ತಳ ಸಮುದಾಯದವರಾರೂ ಅಕ್ಷರ ಸಂಸ್ಕೃತಿಯತ್ತ ನೋಡದ ಕಾಲದಲ್ಲಿ ಮಹಿಳೆಯರಿಗಾಗಿ ಶಾಲೆ ತೆರೆದ ಸಾಹಸಿ ಶಿಕ್ಷಕಿ ಅವರು.

1831ರಲ್ಲಿ ಮಹಾರಾಷ್ಟ್ರದ ಸತಾರ ಜಿಲ್ಲೆಯ ನೈಗಾಂವ ಗ್ರಾಮದಲ್ಲಿ ಜನಿಸಿದ ಸಾವಿತ್ರಿಬಾಯಿಯ ತಂದೆ ಹಿಂದುಳಿದ ಮಾಲಿ ಸಮುದಾಯದ ಖಂದೋಜಿ ನೇವಸೆ ಪಾಟೀಲ್ ಹಾಗೂ ತಾಯಿ ಲಕ್ಷ್ಮಿಬಾಯಿ. ಅಂದಿನ ಕಾಲಘಟ್ಟದ ಕಟ್ಟುಪಾಡುಗಳಿಗೆ ಕಟ್ಟುಬಿದ್ದ ಹೆತ್ತವರು ಮಗಳಿಗೆ 9 ವರ್ಷತುಂಬುವಷ್ಟರಲ್ಲೇ, ಬಾಲ್ಯವಿವಾಹ ಮಾಡಿಬಿಟ್ಟರು. ಸಾವಿತ್ರಿಬಾಯಿ ಅವರನ್ನು ವರಿಸಿದ ಬಾಲಕ ಸಾಮಾನ್ಯನೇನಲ್ಲ. ಅಂದಿನ ದಿನಮಾನಗಳಲ್ಲಿ ಇಂಗ್ಲೀಷ್ ಕಲಿತ, ಸಾಮಾಜಿಕ ಬದಲಾವಣೆಯ ಕನಸುಗಾರ, ಹದಿಹರೆಯದ ಪೋರ ಜ್ಯೋತಿಬಾ ಫುಲೆ. ಸಾವಿತ್ರಿಬಾಯಿ ಅವರ ಬದುಕಿನಲ್ಲಿ ಅವರ ವಿವಾಹವು, ಮಹತ್ತರ ಬದಲಾವಣೆಗೆ ಪ್ರೇರಣೆಯಾಯಿತು.

ಜ್ಯೋತಿಬಾ ಫುಲೆ ತಮ್ಮ ಜೀವನ ಸಂಗಾತಿ ಸಾವಿತ್ರಿಬಾಯಿ ಅವರಿಗೆ ಅಕ್ಷರಜ್ಞಾನದ ಬೆಳಕನ್ನು ನೀಡಿ ಮೊದಲ ಗುರುವಾದರು. ಅಂದಿನ ಕಾಲಮಾನದಲ್ಲಿ ಭಾರತೀಯ ಸಮಾಜದಲ್ಲಿ ಹಾಸು–ಹೊಕ್ಕಾಗಿದ್ದ ಕರಾಳ ಜಾತಿ ವ್ಯವಸ್ಥೆಯ ಪರಿಣಾಮ, ತಳ ಸಮುದಾಯ ಮತ್ತು ಅಸ್ಪೃಶ್ಯರ ಹೆಣ್ಣು ಮಕ್ಕಳು ಅಕ್ಷರ ಕಲಿಯಲು ಇದ್ದ ಅಡ್ಡಿಯೇ ಅವರ ಹಂಬಲದ ಹಿಂದಿನ ಕಾರಣ.

ಸಾವಿತ್ರಿಬಾಯಿಫುಲೆ ಅವರು 1847ರಲ್ಲಿ ಮಹಾರವಾಡದ ಅಸ್ಪೃಶ್ಯ ಕೇರಿಯಲ್ಲಿ ದಲಿತ ಹೆಣ್ಣು ಮಕ್ಕಳಿಗಾಗಿ 'ಅಹಿಲ್ಯಾಶ್ರಮ' ಎಂಬ ಪಾಠಶಾಲೆ ತೆರೆದು ಹೊಸ ಪರ್ವಕ್ಕೆ ನಾಂದಿಯಾದರು. ಮುಂದೆ ಪತಿಯ ಇಚ್ಛೆಯಂತೆ ಎಲ್ಲಾ ಜಾತಿಯ ಹೆಣ್ಣು ಮಕ್ಕಳಿಗೂ 1848ರಲ್ಲಿ ಪುಣೆಯ ಬುಧವಾರ ಪೇಟೆಯಲ್ಲಿ ಶಾಲೆ ತೆರೆದರು. ಈ ಕನ್ಯಾ ಪಾಠಶಾಲೆ ಭಾರತದಲ್ಲಿ ಸರ್ಕಾರದ ನೆರವಿಲ್ಲದೆ ಸ್ಥಳೀಯರಿಂದಲೇ ಪ್ರಾರಂಭವಾದ ಮೊದಲನೆಯದು ಎಂಬ ಕೀರ್ತಿಗೆ ಭಾಜನವಾಯಿತು. ಎಲ್ಲಾ ಜಾತಿ–ವರ್ಗದ ಹೆಣ್ಣು ಮಕ್ಕಳಿಗೂ ಅಲ್ಲಿ ಮುಕ್ತ ಪ್ರವೇಶವಿತ್ತು. ಮುಖ್ಯ ಶಿಕ್ಷಕಿಯಾಗಿ ನೇಮಕವಾದ ಸಾವಿತ್ರಿಬಾಯಿ ಫುಲೆ ಅವರು ಶಾಲೆಗೆ ನಡೆದು ಹೋಗುವಾಗ ಕೆಲ ಜಾತಿವಾದಿ ದುರುಳರ ಅವಹೇಳನೆಗೆ ನಿತ್ಯ ಗುರಿಯಾಗುತ್ತಿದ್ದರು. ಪಾಠಶಾಲೆಗಳ ಪ್ರಾರಂಭದ ಪರಿಣಾಮವಾಗಿ ಮುಂದಿನ 4 ವರ್ಷಗಳಲ್ಲೇ ಶಾಲೆಯ ಸಂಖ್ಯೆ 18ಕ್ಕೆ ಏರಿ, ಮಕ್ಕಳ ಸಂಖ್ಯೆ 500ಕ್ಕೆ ಏರಿಕೆಯಾಯಿತು!

ಸಾವಿತ್ರಿಬಾಯಿಫುಲೆ ಅವರ ಕೈಂಕರ್ಯ, ಶಾಲೆಯ ಶಿಕ್ಷಣಕ್ಕಷ್ಟೇ ಸೀಮಿತವಾಗದೇ, ಅದು ಬೇರೆ ಬೇರೆ ಕ್ಷೇತ್ರಗಳಿಗೂ ವಿಸ್ತರಿಸಿತು. ಒಮ್ಮೆ ಅಸಹಾಯಕ ಪರಿತ್ಯಕ್ತ ಹೆಣ್ಣು ಮಗಳೊಬ್ಬಳು, ಆಕಸ್ಮಿಕವಾಗಿ ತಾಯಿಯಾಗುವ ಸಂಕಷ್ಟಕ್ಕೆ ಸಿಲುಕಿ ಜೀವ ಕಳೆದುಕೊಳ್ಳುವ ಸ್ಥಿತಿಯಲ್ಲಿದ್ದಳು. ಆಕೆಯನ್ನು ಸಾವಿತ್ರಿಬಾಯಿ ದಂಪತಿಗಳು

ಪು.ತಿ.ನೋ.



ಸಮಾಧಾನಿಸಿ, ಆಕೆ ಹೆತ್ತ ಮಗುವನ್ನು ದಂಪತಿಯೇ ಸಾಕುತ್ತಾರೆ. ಇಂತಹ ಸಂಕಷ್ಟಕ್ಕೆ ಸಿಲುಕುವ ಹೆಣ್ಣು ಮಕ್ಕಳಿಗಾಗಿಯೇ ಫುಲೆ ದಂಪತಿ 1853ರಲ್ಲಿ 'ಬಾಲಹತ್ಯಾ ನಿಷೇಧಕ ಪ್ರಸೂತಿ ಗೃಹ' ಸ್ಥಾಪಿಸಿ, ತಾಯ್ತನದ ಘನತೆಯನ್ನು ಎತ್ತಿ ಹಿಡಿದದ್ದು, ದೇಶದಲ್ಲಿಯೇ ಅಪರೂಪವೆನಿಸಿದ ಪ್ರಸಂಗ. ಮಹಿಳೆಯರಲ್ಲಿ ಮಾನವ ಹಕ್ಕುಗಳ ಕುರಿತು ಅರಿವು ಮೂಡಿಸುವ ಮತ್ತು ಸಾಮಾಜಿಕ ಅನಿಷ್ಟ ಪರಂಪರೆಗಳ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ 1852ರಲ್ಲಿ 'ಮಹಿಳಾ ಸೇವಾ ಮಂಡಳಿ'ಯನ್ನು ಫುಲೆ ದಂಪತಿ ಸ್ಥಾಪಿಸಿದರು. ಪುಣೆಯ ಜಿಲ್ಲಾಧಿಕಾರಿಯ ಪತ್ನಿ ಇದರ ಅಧ್ಯಕ್ಷರಾದರೆ, ಸಾವಿತ್ರಿಬಾಯಿಫುಲೆ ಸ್ಥಾಪಕ ಕಾರ್ಯದರ್ಶಿ – ಯಾದರು. ಈ ಮಹಿಳಾ ಸೇವಾ ಮಂಡಳಿಯು ದೇಶದ ಮೊಟ್ಟ ಮೊದಲ ಮಹಿಳಾ ಸೇವಾ ಸಂಸ್ಥೆಯೆಂಬ ಹೆಗ್ಗಳಿಕೆಗೂ ಪಾತ್ರವಾಯಿತು.

ಸಾವಿತ್ರಿಬಾಯಿ ಅವರ ಬದುಕು ಕೇವಲ ಸಮಾಜ ಸೇವೆಗೆ ಮಾತ್ರ ಮುಡಿಪಾಗಲಿಲ್ಲ. ಸಾಹಿತ್ಯದಲ್ಲೂ ಆಸಕ್ತಿ ಹೊಂದಿದ್ದ ಅವರು ಮರಾಠಿಯಲ್ಲಿ ಬಿಡಿ ಕವನ ಬರೆಯಲಾರಂಭಿಸಿದರು. ಅವರ ಬರವಣಿಗೆ ಜನಜಾಗೃತಿ ಉಂಟು ಮಾಡುವ ಮಾಧ್ಯಮವಾಯಿತು. ಅವರ ಮೊದಲ ಕವನ ಸಂಕಲನ 'ಬಾಪುಲೆ' 1854 ರಲ್ಲಿ ಪ್ರಕಟವಾಯಿತು. ಇದು ಬ್ರಿಟಿಷ್ ಆಳ್ವಿಕೆಯಲ್ಲಿ ಭಾರತದಲ್ಲಿ ಪ್ರಕಟವಾದ ಮೊದಲ ಭಾರತೀಯ ಕವನ ಸಂಕಲನ ಎಂಬ ಪ್ರಶಂಸೆಗೂ ಪಾತ್ರವಾಯಿತು. ಅವರ ಮತ್ತೊಂದು ಕವನಗುಚ್ಛ 'ಬಾವನ್ ಕಶಿ ಸುಬೋಧ್‌ರತ್ನಾಕರ್' 1891ರಲ್ಲಿ ಪ್ರಕಟವಾಯಿತು.


ಸಮಾಜ ಕಾರ್ಯಗಳಿಗೆ ಸಾಂಸ್ಥಿಕ ರೂಪ ದೊರೆತರೆ ಹೆಚ್ಚಿನ ಬೆಂಬಲ ಸಿಗುವುದೆಂಬ ಉದ್ದೇಶದಿಂದ ಫುಲೆ ದಂಪತಿ ಪುಣೆಯಲ್ಲಿ 1873ರಲ್ಲಿ 'ಸತ್ಯಶೋಧಕ ಸಮಾಜ' ಎಂಬ ಸಂಸ್ಥೆಯೊಂದನ್ನು ಸ್ಥಾಪಿಸಿದರು. ಸಂಸ್ಥೆಯ ಉದ್ದೇಶ ತಳ ಸಮುದಾಯದ ಜನರಿಗೆ ಅವರ ಹಕ್ಕುಗಳನ್ನು ತಿಳಿಯಪಡಿಸುವುದು ಹಾಗೂ ಧರ್ಮದ ಹೆಸರಿನಲ್ಲಿ ಅನಾಚಾರವನ್ನು ಎಸಗುತ್ತಿದ್ದ ಪುರೋಹಿತ ಷಾಹಿಯನ್ನು ವಿರೋಧಿಸುವುದಾಗಿತ್ತು. ಈ ನಡುವೆ ಜ್ಯೋತಿ ಬಾಫುಲೆ ಮರಣವನ್ನಪ್ಪಿದರು. ಸುಮಾರು 5 ದಶಕಗಳಿಗೂ ಹೆಚ್ಚು ಕಾಲ ಜನರಿಗಾಗಿಯೇ ಬದುಕು ಸವೆಸಿದ ಸಾವಿತ್ರಿಬಾಯಿಫುಲೆ ಸಾಮಾಜಿಕ ಸೇವೆ ಮಾಡುತ್ತಲೇ 1897ರ ಮಾರ್ಚ್ 10 ರಂದು ಅಸುನೀಗಿದರು.

ಭಾರತೀಯ ಮಹಿಳೆಯರು ಪುರುಷರಿಗೆ ಸರಿಸಮಾನವಾದ ಬದುಕು ನಡೆಸುವಂತಾದರೆ; ಅದು ಅಕ್ಷರ ತಾಯಿಯ ತ್ಯಾಗದ ಬದುಕಿಗೆ ಸಲ್ಲಿಸುವ ಸಾರ್ಥಕದ ಗೌರವ. ಇದು ಸಾವಿತ್ರಿ ಫುಲೆಯವರ ಕನಸು ಕೂಡ ಆಗಿತ್ತು.

ಬ್ರಿಟಿಷ್ ಸರ್ಕಾರ 'ಇಂಡಿಯಾಸ್ ಫಸ್ಟ್ ಲೇಡಿ ಟೀಚರ್' ಎಂದು ಸಾವಿತ್ರಿಬಾಯಿ ಅವರಿಗೆ ಗೌರವಸಲ್ಲಿಸಿತ್ತು. 1998ರಲ್ಲಿ ಅವರ ಗೌರವಾರ್ಥವಾಗಿ ಭಾರತ ಸರ್ಕಾರ ಅಂಚೆ ಚೀಟಿ ಬಿಡುಗಡೆ ಮಾಡಿತು. 2015ರಲ್ಲಿ ಪುಣೆ ವಿಶ್ವವಿದ್ಯಾಲಯಕ್ಕೆ 'ಸಾವಿತ್ರಿಬಾಯಿ ಫುಲೆ ವಿಶ್ವವಿದ್ಯಾಲಯ' ಎಂದು ಮರುನಾಮಕರಣ ಮಾಡಲಾಯಿತು. ಮಹಾರಾಷ್ಟ್ರ ಸರ್ಕಾರ ಸಾವಿತ್ರಿಬಾಯಿ ಅವರ ಜನ್ಮ ಶತಮಾನೋತ್ಸವ ಆಚರಿಸಿ, ಪ್ರತಿ ವರ್ಷ ಅವರ ಜನ್ಮದಿನದಂದು 'ಸಾವಿತ್ರಿ ಉತ್ಸವ' ಆಚರಿಸಲು ನಿರ್ಧರಿಸಿರುವುದು ಎಲ್ಲಾ ಭಾರತೀಯ ಮಹಿಳೆಯರಿಗೆ ಸಂದ ಪುರಸ್ಕಾರ.

**– ಡಾ. ಶ್ರೀಧರ ಹೆಚ್.**
ಮುಖ್ಯಸ್ಥರು, ಇತಿಹಾಸ ವಿಭಾಗ

## ವಿನೂತನ ಸುಧಾರಣೆಗಳ ಹರಿಕಾರ ದಿ|| ರಾಮಕೃಷ್ಣ ಹೆಗಡೆ



ಅತಿ ಚಾಣಾಕ್ಷ ರಾಜಕಾರಣಿ ಎಂದೇ ಹೆಸರಾಗಿದ್ದ ರಾಮಕೃಷ್ಣ ಹೆಗಡೆಯವರು ಆಗಸ್ಟ್ 29, 1926ರಲ್ಲಿ ಸಿದ್ದಾಪುರ ತಾಲ್ಲೂಕಿನ ದೊಡ್ಮನೆ ಗ್ರಾಮದಲ್ಲಿ ಜನಿಸಿದರು.

ಮಹಾಬಲೇಶ್ವರ ಹೆಗಡೆ ಹಾಗೂ ಸರಸ್ವತಿ ಹೆಗಡೆ ದಂಪತಿಗಳಿಗೆ ಜನಿಸಿದ ಇವರು ಮೂಲತಃ ಕೃಷಿಕ ಕುಟುಂಬದಿಂದ ಬಂದವರಾಗಿದ್ದರು.

ಇವರು ಕಾಶೀವಿದ್ಯಾಪೀಠ, ಬನಾರಸ್ ಹಾಗೂ ಲಕ್ನೋ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾಭ್ಯಾಸ ಮಾಡಿ ಅರ್ಥಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದರು.

ಬಹುಮುಖ ಪ್ರತಿಭಾವಂತರಾದ ಹೆಗಡೆಯವರು 1942ರ ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆ ವಾಸವನ್ನು ಅನುಭವಿಸಿದರು.

ತಮ್ಮ 20ನೇ ವಯಸ್ಸಿನಲ್ಲಿಯೇ ರೈತ ಚಳುವಳಿಯನ್ನು ರೂಪಿಸಿದ ಇವರು ಕರ್ನಾಟಕದಲ್ಲಿ ಜನಮನ್ನಣೆಗೆ ಪಾತ್ರರಾದರು. ಅಲ್ಲದೆ ಕನ್ನಡದ 'ಮರಣಮೃದಂಗ' ಮತ್ತು 'ಪ್ರಜಾಶಕ್ತಿ' ಎಂಬ ಚಲನಚಿತ್ರಗಳಲ್ಲಿ ನಟಿಸಿರುವುದು ಇವರ ಬಹುಮುಖ ಪ್ರತಿಭೆಗೆ ಸಾಕ್ಷಿಯಾಗಿದೆ. ಅಲ್ಲದೆ ಪತ್ರಕರ್ತನಾಗಬೇಕೆಂಬ ಆಸೆಯನ್ನು ಹೊಂದಿದ್ದ ಇವರು ವಿದ್ಯಾರ್ಥಿ ದಿಸೆಯಿಂದಲೇ 'ಹೂವಿನ ಸರ' ಎಂಬ ಕೈಬರಹದ ಪತ್ರಿಕೆಗೆ ಲೇಖನ ಬರೆಯುತ್ತಿದ್ದರು.

ವಕೀಲ ವೃತ್ತಿಯನ್ನು ನಿರ್ವಹಿಸಿದ ಇವರು ಕೆಲಕಾಲ ಶಿರಸಿ ಪತ್ರಿಕೆಯಲ್ಲಿಯೂ ಕಾರ್ಯನಿರ್ವಹಿಸಿದರು. ನಂತರ, ಕಾಲದ ಒತ್ತಡದಿಂದ ರಾಜಕೀಯಕ್ಕೆ ಮುಖ ಮಾಡಿದ್ದರಿಂದ ತಾನು



ಪತ್ರಕರ್ತನಾಗುವ ಬಯಕೆ ಈಡೇರದಿದ್ದರಿಂದ ಬಹಳ ಸಾರಿ ನೊಂದುಕೊಂಡಿದ್ದೂ ಉಂಟು.

1954ರಲ್ಲಿ ರಾಜಕೀಯ ಪ್ರವೇಶ ಮಾಡಿದ ಹೆಗ್ಡೆಯವರು ಮೊದಲಿಗೆ ಜಿಲ್ಲಾ ಕಾಂಗ್ರೆಸ್ ಘಟಕದ ಅಧ್ಯಕ್ಷರಾಗಿ ಆಯ್ಕೆಯಾದರು. ನಂತರ 1957ರಲ್ಲಿ ಮೊದಲ ಬಾರಿಗೆ ಕರ್ನಾಟಕ ವಿಧಾನ ಸಭೆಗೆ ಆಯ್ಕೆಯಾದರು. 1975ರಲ್ಲಿ ಇಂದಿರಾಗಾಂಧಿಯವರು ರಾಷ್ಟ್ರದ ಮೇಲೆ ಹೇರಿದ ತುರ್ತುಪರಿಸ್ಥಿತಿಯನ್ನು ವಿರೋಧಿಸಿ ಜೈಲು ವಾಸವನ್ನು ಅನುಭವಿಸಿದ ಈ ನಿಷ್ಠಾವಂತ ರಾಜಕಾರಣಿ ಜೈಲಿನಿಂದ ಹೊರಬಂದು ಜನತಾ ಪಾರ್ಟಿಯನ್ನು ಸೇರಿದರು.

ನಂತರದ ಬೆಳವಣಿಗೆಗಳಲ್ಲಿ ಬಿಜೆಪಿಯ 18 ಶಾಸಕರ ಬೆಂಬಲ ಪಡೆದ ಈ ಚಾಣಾಕ್ಷ ರಾಜಕಾರಣಿ 1982ರಲ್ಲಿ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾದರು. ವೈಶಿಷ್ಟ್ಯವೆಂದರೆ, ಇವರು ದೇಶದ ಮೊದಲ ಕಾಂಗ್ರೆಸ್ಸೇತರ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು.

ಆದರೆ 1985ರಲ್ಲಿ ರಾಜ್ಯದ ಸ್ಥಳೀಯ ಸಂಸ್ಥೆಗಳಿಗೆ ನಡೆದ ಚುನಾವಣೆಯಲ್ಲಿ ಪಕ್ಷ ಹಿನ್ನಡೆ ಸಾಧಿಸಿದ್ದರಿಂದ ನೈತಿಕ ಹೊಣೆಹೊತ್ತು ತನ್ನ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದ್ದು ಇವರ ಸಜ್ಜನಿಕೆಯ ಪ್ರತಿರೂಪ ಎನ್ನಬಹುದು. ಆದರೆ ಆ ವರ್ಷ ನಡೆದ ವಿಧಾನಸಭೆ ಚುನಾವಣೆಯಲ್ಲಿ ಪೂರ್ಣಬಹುಮತದೊಂದಿಗೆ ಆರಿಸಿ ಬಂದ ಅವರು ಮತ್ತೊಮ್ಮೆ ರಾಜ್ಯದ ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸಿದರು. ಆದರೆ 1988ರಲ್ಲಿ ಉಂಟಾದ ದೂರವಾಣಿ ಕದ್ದಾಲಿಕೆ ಹಗರಣದಿಂದ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಹೊರಬಂದರು.

1989ರಲ್ಲಿ ಬೆಂಗಳೂರಿನ ಬಸವನಗುಡಿ ಕ್ಷೇತ್ರದಿಂದ ಸ್ಪರ್ಧಿಸಿ ಮತ್ತೆ ವಿಧಾನ ಸಭೆಗೆ ಚುನಾಯಿತರಾದರು.

1989ರಲ್ಲಿಯೇ ವಿ.ಪಿ. ಸಿಂಗ್ ನೇತೃತ್ವದ ಕೇಂದ್ರೀಯ ಯೋಜನಾ ಆಯೋಗದ ಉಪಾಧ್ಯಕ್ಷರಾಗಿದ್ದರು.

1991ರಲ್ಲಿ ಬಾಗಲಕೋಟೆಯಿಂದ ಲೋಕಸಭೆಗೆ ಸ್ಪರ್ಧಿಸಿ ಸಿದ್ದು ನ್ಯಾಮಗೌಡರಿಂದ ಸೋತರು.

1998ರಲ್ಲಿ ವಾಜಪೇಯಿ ನೇತೃತ್ವದ ಸರ್ಕಾರದಲ್ಲಿ ಕೇಂದ್ರ ವಾಣಿಜ್ಯ ಸಚಿವರಾಗಿಯೂ ಸೇವೆ ಸಲ್ಲಿಸಿದ ಇವರು ವಾಜಪೇಯಿ ಸರ್ಕಾರದ ಪ್ರಬಲ ವಕ್ತಾರರಾಗಿದ್ದರು.

ಹೀಗೆ ಹೆಗಡೆ ಅವರು ಸಜ್ಜನ ರಾಜಕಾರಣಿಯಾಗಿ ಎರಡು ಅವಧಿಗೆ ಕರ್ನಾಟಕದ ಮುಖ್ಯಮಂತ್ರಿಯಾಗಿ ಅಂದರೆ ಜನವರಿ 1982 ರಿಂದ ಡಿಸೆಂಬರ್ 1984 ಹಾಗೂ 1985 ರಿಂದ ಆಗಸ್ಟ್ 1988ರ ವರೆಗೆ ಅಲ್ಪಮತ ಸರ್ಕಾರವನ್ನು ಮುನ್ನಡೆಸಿದ ಚಾಣಾಕ್ಷತೆ ಇವರ ಹಿರಿಮೆಗೆ ಸಾಕ್ಷಿಯಾಗಿದೆ.

ರಾಜಕಾರಣದಲ್ಲಿ ಮೌಲ್ಯಗಳನ್ನು ಕಾಣಲಾಗುವುದಿಲ್ಲ ಎಂಬ ಮಾತಿದೆಯಾದರೂ ಹೆಗ್ಡೆಯವರು ಈ ಮಾತಿಗೆ ಅಪವಾದದಂತೆ ತಾವು ಆಡುತ್ತಿದ್ದ ಮೌಲ್ಯಗಳನ್ನು ಚಾಚೂತಪ್ಪದೆ ಅನುಸರಿಸಿದವರು. ಹೆಗಡೆ ಅವರು ರಾಜಕಾರಣದಲ್ಲಿ 'ಮೌಲ್ಯಾಧಾರಿತ ರಾಜಕಾರಣ' ಎಂಬ ಪದದ ಹುಟ್ಟಿಗೂ ಕಾರಣರಾದರು ಎಂದರೆ ತಪ್ಪಾಗುವುದಿಲ್ಲ. ಏಕೆಂದರೆ ಅವರು ಭಾರತದಲ್ಲಿಯೇ ಮೊಟ್ಟಮೊದಲಿಗೆ ಪಂಚಾಯತ್ ರಾಜ್ ಯೋಜನೆಯ ಮೂಲಕ ಅಧಿಕಾರವನ್ನು ಜನರಲ್ಲಿಗೆ, ಕೊಂಡೊಯ್ಯಬೇಕೆಂಬ ತಮ್ಮ ಮನದ ಇಂಗಿತವನ್ನು ಅನುಷ್ಠಾನಗೊಳಿಸಿದರು. ಇದು ಅವರ ಹಿರಿಮೆಯಾಗಿದೆ.

❖ ಬಂಜರು ಭೂಮಿಗಳನ್ನು ಕೃಷಿಗೆ ಉಪಯೋಗಿಸಿಕೊಳ್ಳಲು ಅನುಕೂಲವಾಗುವಂತೆ ತೋಟಗಾರಿಕಾ ಬೆಳೆಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿ ರೈತರಿಗೆ ಅನುಕೂಲ ಮಾಡಿದರು. ಈ ನೀತಿಯಿಂದ ಪ್ರೇರಿತರಾದ ಪ್ರಧಾನಿ ರಾಜೀವ್‌ಗಾಂಧಿಯವರು ರಾಷ್ಟ್ರೀಯ ತೋಟಗಾರಿಕಾ ನಿಗಮವನ್ನು ಸ್ಥಾಪಿಸಲು ಹೆಗಡೆಯವರು ನಾಂದಿಯಾದರು.

❖ ವಿಧವಾ ಪಿಂಚಣಿ, ರಾಜ್ಯ ಅಲ್ಪ ಸಂಖ್ಯಾತರ ಆಯೋಗ ಅಭಿವೃದ್ಧಿನಿಗಮಗಳ ಸ್ಥಾಪನೆಗೆ ಕಾರಣರಾದರು. ಹಾಗೂ ಮಹಿಳೆಯರಿಗೆ 25% ರ ಮೀಸಲಾತಿ ಕಲ್ಪಿಸಿದರು.

❖ ದೇಶದಲ್ಲಿಯೇ ಮೊದಲ ಬಾರಿಗೆ ಭ್ರಷ್ಟಾಚಾರ ತಡೆಗಟ್ಟಲು ಕರ್ನಾಟಕ ಲೋಕಾಯುಕ್ತದ ಸ್ಥಾಪನೆ ಇವರ ಹಿರಿಮೆಯಾಗಿದೆ.

❖ ಲೋಕಾಯುಕ್ತರಿಗೆ ಮುಖ್ಯಮಂತ್ರಿಗಳ, ಮಂತ್ರಿಗಳ ವಿರುದ್ಧ ಮೊಕದ್ದಮೆಗಳನ್ನು ದಾಖಲಿಸಿಕೊಳ್ಳುವ ಅಧಿಕಾರ ನೀಡಿದರು. ಆದರೆ ಸಚಿವ ಸಂಪುಟದ ತೀವ್ರವಿರೋಧಗಳಿಂದ ಲೋಕಾಯುಕ್ತರ ಪರಮಾಧಿಕಾರವನ್ನು ಮೊಟಕುಗೊಳಿಸಲಾಯಿತು. ಇದರಿಂದ ಭ್ರಷ್ಟಾಚಾರದ ನಿರ್ಮೂಲನೆಯತ್ತ ಹೆಗಡೆಯವರು ಹೊಂದಿದ್ದ ಕಾಳಜಿ ಅರ್ಥವಾಗುತ್ತದೆ.

❖ ಮೊದಲಿಗೆ ವಿದ್ಯಾರ್ಥಿಗಳಿಗೆ ಬಸ್‌ಪಾಸ್ ಸೌಲಭ್ಯವನ್ನು ಹೆಗಡೆಯವರೇ ಆರಂಭಿಸಿದರು ಎನ್ನುವುದು ಅವರ ಯುವಶಕ್ತಿಯ ಬಗ್ಗೆ ಕಾಳಜಿಯನ್ನು ತೋರಿಸುತ್ತದೆ.

ಹೀಗೆ ನೈತಿಕತೆಯನ್ನು ಮೌಲ್ಯವಾಗಿ ಪಾಲಿಸಿಕೊಂಡು ಬಂದ ಹೆಗ್ಡೆಯವರು 'Kingship has no kin ship' ಎಂಬ ಮಾತಿಗೆ ನಿಜವಾಗಿಯೂ ಅರ್ಥ ತಂದುಕೊಟ್ಟ ಮಹಾ ರಾಜಕೀಯ ಮುತ್ಸದ್ದಿ, ತನ್ನ ರಾಜಕೀಯ ಅವಧಿಯಲ್ಲಿ ಎಲ್ಲಾ ಖಾತೆಗಳನ್ನು ನಿರ್ವಹಿಸಿದ ಅವರು ಮೇಲೆ ತಿಳಿಸಿದಂತೆ ಎರಡು ಬಾರಿ ಕರ್ನಾಟಕದ ಮುಖ್ಯಮಂತ್ರಿಯಾಗಿ ಮಿಂಚಿದ ಈ ಜನನಾಯಕ ದಿನಾಂಕ 12.01.2004 ರಂದು ತಮ್ಮ ವಿಧಿವಶರಾದರು.

**– ನಂದೀಶ ಎ.ಆರ್.**
ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ

❖❖❖❖



# Department of History, Geography & IQAC

## Organised National Webinar
## on
## Impact of Covid-19 on
## Historical & Geographical Tourism in India

Resource Person

**Dr. N.S. Rangaraju**

Professor (Rtd.)


Department of Ancient History and Archaeology

University of Mysore, Manasagangothri, Mysuru

**18.08.2020**





# ವಿಶ್ವ ಪ್ರವಾಸೋದ್ಯಮದಲ್ಲಿ ಮೈಸೂರಿನದ್ದೇ ಪ್ರಮುಖ ಪಾತ್ರ

## ಮಹಾಜನ ಕಾಲೇಜಿನಲ್ಲಿ ರಾಷ್ಟ್ರಮಟ್ಟದ ವೆಬಿನಾರ್; ಡಾ.ರಂಗರಾಜು ಪ್ರಶಂಸೆ

ಮೈಸೂರು: ಪ್ರವಾಸೋದ್ಯಮ ಮತ್ತು ವಲಸೆ ಎರಡೂ ಪರಸ್ಪರ ಭಿನ್ನವಾಗಿವೆ. ವ್ಯಾಪಾರ ಮತ್ತು ವಾಣಿಜ್ಯದ ಉದ್ದೇಶಕ್ಕಾಗಿ ಮೌರ್ಯ ಮತ್ತು ರೋಮ್ ಸಾಮ್ರಾಜ್ಯಗಳಲ್ಲಿ ಪ್ರವಾಸೋದ್ಯಮದ ಪ್ರಮುಖ ಅಂಶಗಳನ್ನು ಸಾಂಸ್ಕೃತಿಕ, ವರ್ಗೀಕೃತ ಹಾಗೂ ಐತಿಹಾಸಿಕ ನೆಲೆಗಟ್ಟಿನಲ್ಲಿವೆ. ಆದರೆ, ವಿಶ್ವ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಮಾನ್ಯತೆ ಪಡೆದ 28 ರಾಜ್ಯಗಳಲ್ಲಿ ಮೈಸೂರು ಅತ್ಯಂತ ಪ್ರಮುಖ ಪಾತ್ರವನ್ನು ವಹಿಸಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚೀನ ಇತಿಹಾಸ ಹಾಗೂ ಪುರಾತತ್ತ್ವ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್.ರಂಗರಾಜು ತಿಳಿಸಿದರು.

ನಗರದ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ಇತಿಹಾಸ, ಭೂಗೋಳಶಾಸ್ತ್ರ ವಿಭಾಗ ಹಾಗೂ ಐಕ್ಯೂಎಸಿ ಘಟಕದ ಸಹಯೋಗದಲ್ಲಿ 'ಭಾರತದ ಐತಿಹಾಸಿಕ ಮತ್ತು ಭೌಗೋಳಿಕ ಪ್ರವಾಸೋದ್ಯಮದ ಮೇಲೆ ಕೋವಿಡ್-19ರ ಪರಿಣಾಮ-ಮೈಸೂರಿನ ಒಂದು ಅಧ್ಯಯನ' ಕುರಿತು ಮಂಗಳವಾರ ನಡೆದ ರಾಷ್ಟ್ರೀಯ ವೆಬಿನಾರ್ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ದೇಶದ ವಿವಿಧ ಕಾಲೇಜಿನ 250ಕ್ಕೂ ಹೆಚ್ಚು ಅಧ್ಯಾಪಕರು, ಸಂಶೋಧನಾ ವಿದ್ಯಾರ್ಥಿಗಳು ಹಾಗೂ ವಿಷಯಾಸಕ್ತರು ವೆಬಿನಾರ್‌ನಲ್ಲಿ ಪಾಲ್ಗೊಂಡಿದ್ದರು.

ಕಾಲೇಜಿನ ಪ್ರಾಂಶುಪಾಲ ಡಾ.ಬಿ.ಆರ್. ಜಯಕುಮಾರಿ, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್.ಶ್ರೀಧರ್ ಭೂಗೋಳಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಜಿ.ದೊಡ್ಡರಸಯ್ಯ, ಭೂಗೋಳಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಕೆ.ಕೆ. ಸೋಮಶೇಖರ, ಅಧ್ಯಾಪಕ ಸಿ.ಎಸ್.ಸಿದ್ದರಾಜು ಹಾಗೂ ಇತಿಹಾಸ ವಿಭಾಗದ ಅಧ್ಯಾಪಕರಾದ ಡಾ.ಎ.ಜಿ.ಧರ್ಮೇಶ್, ಎ.ಆರ್.ನಂದೀಶ್ ಕಾರ್ಯಕ್ರಮದಲ್ಲಿ ಹಾಜರಿದ್ದರು.



## ಇತಿಹಾಸ ವಿಭಾಗ, ಎಂಟ್ರಿ ಟು ಸರ್ವೀಸ್ ಮತ್ತು ಐಕ್ಯೂಎಸಿ ಘಟಕಗಳ ಸಹಯೋಗದಲ್ಲಿ

## "ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ಸವಾಲುಗಳು ಮತ್ತು ಅವಕಾಶಗಳು"

## ವೆಬಿನಾರ್ ಮತ್ತು ಸಂವಾದ ಕಾರ್ಯಕ್ರಮ – 10.12.2020

ಸಂಪನ್ಮೂಲ ವ್ಯಕ್ತಿ

**ಡಾ. ನಂದನ್‌ಕುಮಾರ್ ಜೆ.ವಿ.**

ಜಂಟಿ ನಿರ್ದೇಶಕರು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು.



# ಸ್ಪರ್ಧಾತ್ಮಕ ಪರೀಕ್ಷೆಗಳ ವೆಬಿನಾರ್, ಸಂವಾದ

## ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಮಾರಂಭ


• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಇತಿಹಾಸ ವಿಭಾಗ, ಎಂಟ್ರಿ ಟು ಸರ್ವೀಸ್ ಮತ್ತು ಐಕ್ಯೂಎಸಿ ಘಟಕಗಳ ಸಂಯುಕ್ತಾಶ್ರಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ಸವಾಲುಗಳು ಮತ್ತು ಅವಕಾಶಗಳು ಎಂಬ ವಿಷಯ ಕುರಿತು ವೆಬಿನಾರ್ ಮತ್ತು ಸಂವಾದ ಕಾರ್ಯಕ್ರಮ ನಡೆಯಿತು.

ರಾಜ್ಯ ಸರ್ಕಾರದ ಆರ್ಥಿಕ ಇಲಾಖೆಯ ಹಿರಿಯ ಜಂಟಿ ನಿರ್ದೇಶಕ ಡಾ. ಜಿ.ವಿ. ನಂದನ್‌ಕುಮಾರ್ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಮಾತನಾಡಿದರು.

ನಾಗರೀಕ ಸೇವಾ ಪರೀಕ್ಷೆಗಳಲ್ಲಿ ಯಶಸ್ಸು ಸಾಧಿಸಲು ಸಕಾರಾತ್ಮಕ ಹಾಗೂ ಪ್ರೇರಣಾತ್ಮಕ ಆಲೋಚನೆಗಳನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯ, ಪ್ರತಿವರ್ಷ ಫೆಬ್ರವರಿ ತಿಂಗಳಂದು ನಾಗರೀಕ ಸೇವಾ ಪರೀಕ್ಷೆಗಳ ಸುತ್ತೋಲೆ ಹೊರಡಿಸಲಾಗುತ್ತದೆ. ಈ ಪೂರ್ವಭಾವಿ ಪರೀಕ್ಷೆಗಳನ್ನು ತೇರ್ಗಡೆ ಹೊಂದಲು ವಿದ್ಯಾರ್ಥಿಗಳಲ್ಲಿ ಕಠಿಣ ಪರಿಶ್ರಮ, ಸಂವಹನ ಕೌಶಲ್ಯಗಳ ಜೊತೆಗೆ ಪ್ರಸ್ತುತ ರಾಜಕೀಯ, ಆರ್ಥಿಕ, ಸಾಮಾಜಿಕ, ಭೌಗೋಳಿಕ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿದ್ಯಮಾನಗಳ ಅಧ್ಯಯನ ಅವಶ್ಯಕವೆಂದು ಹೇಳಿದರು.

ನಂತರ ಕಾಲೇಜು ವಿವಿಧ ವಿಭಾಗಗಳ ವಿದ್ಯಾರ್ಥಿಗಳಿಂದಸಂವಾದಕಾರ್ಯಕ್ರಮನಡೆಯಿತು. ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಡಾ. ನಂದನ್‌ಕುಮಾರ್ ಅವರು ಸಮಂಜಸ ಉತ್ತರಗಳ ಮೂಲಕ ಸಲಹೆ-ಸೂಚನೆಗಳನ್ನು ನೀಡಿದರು. ಕಾಲೇಜಿನ ಪ್ರಾಂಶುಪಾಲೆ ಡಾ. ಬಿ.ಆರ್. ಜಯಕುಮಾರಿ, ಸಿಇಒ ಡಾ. ಎಸ್.ಆರ್. ರಮೇಶ್, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಎಚ್. ಶ್ರೀಧರ, ವಿಭಾಗದ ಅಧ್ಯಾಪಕರಾದ ಡಾ. ಎ.ಜಿ. ಧಮೇಶ, ಎ.ಆರ್. ನಂದೀಶ ಹಾಗೂ ಕಾಲೇಜಿನ ವಿವಿಧ ವಿಭಾಗಗಳ ಮುಖ್ಯಸ್ಥರು, ಅಧ್ಯಾಪಕರು, ಸಿಸ್ಟಂ ಅಡ್ಮಿನ್ ಮಂಜುನಾಥ್, ಅಶೋಕ್ ಮತ್ತು ಕಾಲೇಜಿನ ವಿದ್ಯಾರ್ಥಿಗಳು ಇದ್ದರು.



ಮೈಸೂರಿನ ಜಯಲಕ್ಷ್ಮೀಪುರಂನಲ್ಲಿರುವ ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜು ಇತಿಹಾಸ ವಿಭಾಗ, ಎಂಟ್ರಿ ಟು ಸರ್ವೀಸ್ ಮತ್ತು ಐಕ್ಯೂಎಸಿ ಘಟಕಗಳ ಸಂಯುಕ್ತಾಶ್ರಯದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ಸವಾಲುಗಳು ಮತ್ತು ಅವಕಾಶಗಳು ಎಂಬ ವಿಷಯ ಕುರಿತು ವೆಬಿನಾರ್ ಮತ್ತು ಸಂವಾದ ಕಾರ್ಯಕ್ರಮ ನಡೆಯಿತು.



## ಇತಿಹಾಸ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ – 18.12.2020

# ಸಕಾಲ ಸಪ್ತಾಹ ಆಚರಣೆ – 18.12.2020

ಉಪನ್ಯಾಸ: **ಕು. ಸುಧಾ,** ಜಿಲ್ಲಾ ಸಕಾಲ ಐಟಿ ಕನ್ಸಲ್‌ಟೆಂಟ್, ಜಿಲ್ಲಾಧಿಕಾರಿಗಳ ಕಛೇರಿ, ಮೈಸೂರು.













# ಸಕಾಲದಲ್ಲಿ 1025 ಸೇವೆಗಳು ಲಭ್ಯ

## ಜಿಲ್ಲಾ ಸಕಾಲ ಐಟಿ ಕನ್ಸಲ್‌ಟೆಂಟ್ ಸುಧಾ

• **ಕನ್ನಡಪ್ರಭ ವಾರ್ತೆ** ಮೈಸೂರು

ಸಕಾಲ ಯೋಜನೆಯಲ್ಲಿ ಪ್ರಸ್ತುತ 95 ಇಲಾಖೆಗಳೊಂದಿಗೆ 1025 ಸೇವೆಗಳು ಲಭ್ಯವಿದೆ ಎಂದು ಜಿಲ್ಲಾ ಸಕಾಲ ಐಟಿ ಕನ್‌ಲ್‌ಟೆಂಟ್ ಸುಧಾ ತಿಳಿಸಿದರು.

ನಗರದ ಎಸ್‌ಬಿಆರ್‌ಆರ್ ಮಹಾಜನ ಕಾಲೇಜಿನಲ್ಲಿ ಇತಿಹಾಸ ವಿಭಾಗ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ ಸಕಾಲ ಸಪ್ತಾಹ ಆಚರಣೆಯಲ್ಲಿ ಉಪನ್ಯಾಸ ನೀಡಿದ ಅವರು, ಸಕಾಲ ಎಂದರೆ ನಿಗದಿತ ಸಮಯ. ಅಂದರೆ, ನಾಗರಿಕರಿಗೆ ವಿಳಂಬವಿಲ್ಲದೆ ಸರ್ಕಾರಿ ಸೇವೆಗಳನ್ನು ಒದಗಿಸುವ ದೃಷ್ಟಿಯಿಂದ ಸರ್ಕಾರ ಈ ಯೋಜನೆಯನ್ನು ತಂದಿದೆ. ಸಕಾಲ ಪ್ರಸ್ತುತ 95 ಇಲಾಖೆಗಳೊಂದಿಗೆ 1025 ಸೇವೆಗಳನ್ನು ಒಳಗೊಂಡಿದೆ ಎಂದರು.

ವಿವಿಧ ಇಲಾಖೆಗಳಲ್ಲಿ ಸೇವೆಯನ್ನು ಪಡೆಯ ಬಯಸುವ ನಾಗರಿಕರು ಸಂಬಂಧಿತ ದಾಖಲೆಗಳು ಮತ್ತು ನಿಗದಿಪಡಿಸಿರುವ ಶುಲ್ಕದೊಂದಿಗೆ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸಬಹುದು. ಅರ್ಜಿದಾರರು ರಸೀದಿಯನ್ನು ಆನ್‌ಲೈನ್‌ನಲ್ಲಿ ಪಡೆಯಬಹುದು. ಅರ್ಜಿದಾರರು ತಮ್ಮ ಅರ್ಜಿಯ ಪ್ರಗತಿಯನ್ನು ಮೊಬೈಲ್ ಮೂಲಕ ಎಸ್‌ಎಂಎಸ್‌ನಲ್ಲಿ ಪಡೆಯಬಹುದು ಎಂದು ಅವರು ಹೇಳಿದರು.


ಗ್ರಾಹಕರಿಗೆ ನಾಗರಿಕ ಸೇವೆಯನ್ನು ಒದಗಿಸುವಲ್ಲಿ ವಿಳಂಬವಾದಲ್ಲಿ ವಿಳಂಬಿತ ಅವಧಿಯಲ್ಲಿ ಪ್ರತಿದಿನಕ್ಕೆ ₹ 20 ರಂತೆ ಗರಿಷ್ಠ ₹ 500 ಮೀರದಂತೆ ಸಂಬಂಧಿತ ಸರ್ಕಾರಿ ನೌಕರರು ಅರ್ಜಿ ಸಲ್ಲಿಸಿದ ಸಾರ್ವಜನಿಕರಿಗೆ ಪರಿಹಾರ ಶುಲ್ಕವನ್ನು ನೀಡಬೇಕಾಗುತ್ತದೆ ಎಂದರು. ಕಾಲೇಜಿನ ಪ್ರಾಂಶುಪಾಲ ಡಾ.ಬಿ. ಆರ್. ಜಯಕುಮಾರಿ, ಅಧೀಕ್ಷಕ ಅನುರಾಧ, ಇತಿಹಾಸ ವಿಭಾಗದ ಮುಖ್ಯಸ್ಥ ಡಾ.ಶ್ರೀಧರ ಇದ್ದರು. ಎ.ಎಸ್.ಶ್ರೀನಿವಾಸ ವಂದಿಸಿದರು.










Dr. Sreedhara H, HoD of History has presented the Research Paper on "Swatantryottara Bharathadalli Rashtriya Shikshana Neethi - Ondu Chaaritrika Hinnota" in one day National Seminar on 'Implementation of NEP - 2020 in Karnataka - opportunities and Road Ahead' organised by KRMSS, UoM, KSOU & Karnataka State Higher Education Council on 9.1.2021 at Mysuru.

---

Release of **'Kadamba-29'** Monthly News Letter - 12.01.2021







Hearty Congratulations to our Depatment Faculty

**Dr. Dharmesha A G**

**Awarded 'Best NSS Officer Award'** 2019-2020

University of Mysore




Dept. of History BoE Meeting (2020-21)

20.01.2021